ಪಿ.ಎಚ್‌ಡಿ., ಪದವಿಗಾಗಿ ಸಲ್ಲಿಸುವ ಸಂಶೋಧನಾ ಪ್ರಬಂಧದ ಮಂಡನಾಪೂರ್ವ ಸಾರಲೇಖ

ಸಂಶೋಧನಾ ವಿಷಯ

“ತುಳುನಾಡಿನ ಗುತ್ತುಗಳು: ಇತಿಹಾಸ, ಸಂಸ್ಕೃತಿ ಮತ್ತು ಸ್ಥಿತ್ಯಂತರಗಳು”

ಸಂಶೋಧನಾ ವಿದ್ಯಾರ್ಥಿನಿ

ಜ್ಯೋತಿ. ಪಿ

(MU/EB/Ph.D/CR.05/Hist/2022-23/E.13)

ಇತಿಹಾಸ ಅಧ್ಯಯನ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ - 574199

ಸಂಶೋಧನಾ ಮಾರ್ಗದರ್ಶಕರು

ಡಾ. ತ್ರಿವೇಣಿ

ಸಹ ಪ್ರಾಧ್ಯಾಪಕರು

ಇತಿಹಾಸ ಅಧ್ಯಯನ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ - 574199

ಇತಿಹಾಸ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ-572199

ತುಳುನಾಡಿನ ಗುತ್ತುಗಳು: ಇತಿಹಾಸ, ಸಂಸ್ಕೃತಿ ಮತ್ತು ಸ್ಥಿತ್ಯಂತರಗಳು

1.1 ಪೀಠಿಕೆ

ಕರಾವಳಿ ಕರ್ನಾಟಕದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ರಸ್ತುತ ಕೇರಳದಲ್ಲಿರುವ ಕಾಸರಗೋಡು ಜಿಲ್ಲೆಯನ್ನು ಒಟ್ಟಾಗಿ ಪ್ರಾಚೀನ ಕಾಲದಿಂದಲೂ ತುಳುನಾಡು ಎಂದು ಕರೆಯಲಾಗುತ್ತಿತ್ತು. ತುಳುನಾಡನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಹಾಗೂ ಕಾಲಘಟ್ಟದಲ್ಲಿ ಆಳ್ವಖೇಡ, ತುಳುವ, ತುಳುವನಾಡು, ತುಳುವದೇಶ ಎಂದು ನಾನಾ ಹೆಸರುಗಳಿಂದ ಕರೆಯಲಾಗಿದೆ. ತುಳುನಾಡು ಕರ್ನಾಟಕದ ಭಾಗವಾಗಿದ್ದರೂ ತನ್ನ ವಿಭಿನ್ನ ಸಂಸ್ಕೃತಿ, ಭಾಷೆಗಳಿಂದಾಗಿ ಪ್ರತ್ಯೇಕವಾಗಿ ಗುರುತಿಸಿಕೊಂಡಿರುವ ಪ್ರದೇಶವಾಗಿದೆ. ಸಾಮಾನ್ಯವಾಗಿ ತುಳುನಾಡು ಎಂದ ತಕ್ಷಣ ತುಳು ಭಾಷೆಯನ್ನು ಹೆಚ್ಚಾಗಿ ಮಾತನಾಡುವ ಜನರು ವಾಸಿಸುವ ಪ್ರದೇಶ ಎಂಬ ಕಲ್ಪನೆ ಜನ ಮಾನಸದಲ್ಲಿ ಮೂಡುತ್ತದೆ. ಆದರೆ ಇತಿಹಾಸವನ್ನು ಅವಲೋಕಿಸಿದಾಗ ತುಳುನಾಡು ತುಳು ಭಾಷೆಯನ್ನು ಹೆಚ್ಚಾಗಿ ಮಾತನಾಡುವ ವಾಸಿಸುವ ಪ್ರದೇಶ ಮಾತ್ರವಲ್ಲದೆ ಕನ್ನಡ ಮಾತನಾಡುವ ಪ್ರದೇಶವಾದ ಉತ್ತರಕನ್ನಡದ ಕೆಲವು ಭಾಗಗಳನ್ನು ಒಳಗೊಂಡಿತ್ತು. ಇತಿಹಾಸದ ಕೆಲವು ಕಾಲಘಟ್ಟದಲ್ಲಿ ರಾಜಕೀಯವಾಗಿ ಹಾಗೂ ಆಡಳಿತಾತ್ಮಕವಾಗಿ ತುಳುನಾಡು ವಿಶಾಲವಾಗಿತ್ತು. ಪರಶುರಾಮನ ಸೃಷ್ಟಿಯ 'ಸಪ್ತ ಕೊಂಕಣ' ಪ್ರದೇಶಗಳಲ್ಲಿ ತುಳುನಾಡು ಒಂದಾಗಿದ್ದು, ತುಳುನಾಡು ಪರಶುರಾಮನ ಸೃಷ್ಟಿ ಎಂದು ಜನಜನಿತವಾಗಿದೆ.

1.1.1 ತುಳುನಾಡು ಪದದ ಉತ್ಪತ್ತಿ

ತುಳು ಪದದ ಉತ್ಪತ್ತಿಯ ಕುರಿತು ವಿವಿಧ ಅಭಿಪ್ರಾಯಗಳಿದ್ದು, ತೌಳವ ಬ್ರಾಹ್ಮಣರು, ಸಹ್ಯಾದ್ರಿ ಖಂಡವನ್ನು ಆಧಾರವಾಗಿಟ್ಟುಕೊಂಡು ಉದ್ಯಾವರದ ರಾಜ ರಾಮಭೋಜರಾಯನಿಂದಾಗಿ ತೌಳವ ಪದವು ಉಂಟಾಯಿತು ಎಂದು ಅಭಿಪ್ರಾಯ ಪಡುತ್ತಾರೆ. ರಾಮಭೋಜರಾಯನು ಸರ್ಪ ಹತ್ಯೆಯ ಪ್ರಾಯಶ್ಚಿತಕ್ಕಾಗಿ ವಿವಿಧ ಪೂಜಾ-ಯಾಗಾದಿಗಳನ್ನು ಮಾಡುತ್ತಾ ಬ್ರಾಹ್ಮಣರಿಗೆ ತುಲಾಪುರುಷ ದಾನಗಳನ್ನು ಹಾಗೂ ತುಲಾಭಾರಗಳನ್ನು ತೂಗಿಸಿದನು. ರಾಮಭೋಜರಾಯನು ಈ ಕಾರಣದಿಂದ ತುಲಾರಾಜ, ತುಲಾಪುರುಷನೆಂದು ಕರೆಯಲ್ಪಟ್ಟನು ಹಾಗೂ ಅವನ ರಾಜ್ಯದ ಜನರು ತೌಳವರೆಂದು ಕರೆಸಿಕೊಂಡರು.

ಕೇರಳೋತ್ಪತ್ತಿಯ ಪ್ರಕಾರ ತುಳುವ ಪದವು ತುಳಬನ್ ಪೆರುಮಾಳ ಎಂಬ ಅರಸನಿಂದ ಹುಟ್ಟಿಕೊಂಡಿದೆ. ಡಾ. ಬಿ.ಎ ಸಾಲೆತ್ತೂರರ ಪ್ರಕಾರ ತುಳು ಎಂಬ ಪದವು ತೂಳು ಎಂಬ ಹಳೆಗನ್ನಡ ಪದದಿಂದ ಹುಟ್ಟಿಕೊಂಡಿದೆ. ಅದರ ಅರ್ಥ 'ಹೊಡೆದಾಡುವುದು'. ತುಳುವರು ಮಹಾ ಯೋಧರಾಗಿದ್ದು ಆಗಾಗ ಘಟ್ಟದ ಮೇಲೆ ದಾಳಿ ಮಾಡುತ್ತಿದ್ದ ಕಾರಣ ಘಟ್ಟದ ಮೇಲಿನವರು ಇವರನ್ನು ತುಳುವರೆಂದು ಕರೆದಿರಬಹುದೆಂದು ಸಾಲೆತ್ತೂರರು ಅಭಿಪ್ರಾಯ ಪಡುತ್ತಾರೆ. ಶ್ರೀಯುತ ಗೋವಿಂದ ಪೈಯವರ ಪ್ರಕಾರ ತಮಿಳಿನಲ್ಲಿ 'ತುಳೈ' ಎಂದರೆ ಮುಳುಗು, ನೀರಿನಲ್ಲಿ ಆಡು ಎಂಬ ಅರ್ಥವಿದೆ. ತುಳುನಾಡಿನಲ್ಲಿ ಆ ಕಾಲದಲ್ಲಿ ಬೆಸ್ತರೂ, ಅಂಬಿಗರು ಹೆಚ್ಚಿದ್ದ ಕಾರಣ ಈ ಪ್ರದೇಶವನ್ನು ತುಲು-ತುಳು ಎಂದು ಕರೆದಿರಬಹುದೆಂದು ಅಭಿಪ್ರಾಯ ಪಡುತ್ತಾರೆ. 'ಚುಟು'ವಿನಿಂದ ತುಳುವಾಯಿತೆಂಬ ವಾದವನ್ನೂ ಅವರು ಮುಂದಿಡುತ್ತಾರೆ. ತಗ್ಗು ಪ್ರದೇಶದಲ್ಲಿರುವ ನಾಡೇ ತಲನಾಡು, ಮುಂದೆ ಅದುವೇ ತುಳುನಾಡು ಆಯಿತೆಂದು ನಾರಾಯಣ ಕಿಲ್ಲೆಯವರು ಅಭಿಪ್ರಾಯ ಪಡುತ್ತಾರೆ. 'ತುಳು' ಎಂಬ ಪದವು 'ತುರು' ಪದಕ್ಕೆ ಪರ್ಯಾಯವಾಗಿ ಬಂದಿದೆ ಎಂದು ಡಾ. ಪಿ ಗುರುರಾಜ ಭಟ್ ಅವರು ಅಭಿಪ್ರಾಯ ಪಡುತ್ತಾರೆ. ತುರುವರೆಂದರೆ ತುರುಕಾರರು ಎಂದರೆ ಗೋವಳರು. ಅವರ ಪ್ರಕಾರ ತುರುವರು ಪ್ರಧಾನವಾಗಿರುವ ನಾಡು ತುರುನಾಡು, ಅದುವೇ ತುಳುನಾಡೆಂದು ಜನಜನಿತವಾಯಿತು.

1.1.2 ರಾಜಕೀಯ ಹಿನ್ನೆಲೆ

ಇತಿಹಾಸ ಪೂರ್ವಕಾಲದಲ್ಲಿ ತುಳುನಾಡು ಮಾನವ ಚಟುವಟಿಕೆಗಳ ಕೇಂದ್ರವಾಗಿತ್ತು ಎಂಬುದಕ್ಕೆ ಹಲವು ಸಾಕ್ಷ್ಯಗಳಿವೆ. ತುಳುನಾಡಿನ ಇತಿಹಾಸ ಕಾಲವು ಮೌರ್ಯರ ಆಳ್ವಿಕೆಯಷ್ಟು ಹಿಂದಕ್ಕೆ ಹೋಗುತ್ತಿದ್ದು, ಮೌರ್ಯ ದೊರೆ ಅಶೋಕನ ಬಂಡೆಗಲ್ಲು ಶಾಸನದಲ್ಲಿ 'ಸತಿಯ ಪುತ್ರ' ಎಂಬ ಪ್ರದೇಶದ ಉಲ್ಲೇಖವಿದ್ದು, ಆ ಪ್ರದೇಶವು ತುಳುನಾಡಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಗ್ರೀಕ್ ಬರಹಗಾರ ಟೊಲೆಮಿಯು ಉಲ್ಲೇಖ ಮಾಡಿರುವ ಒಲೋಖೊಯ್ರವು ಆಳ್ವಖೇಡವಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಮೌರ್ಯರ ನಂತರ ದಕ್ಷಿಣ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳಾದ ಶಾತವಾಹನರು ಹಾಗೂ ಕದಂಬರು ತಮ್ಮ ಆಳ್ವಿಕೆಯನ್ನು ತುಳುನಾಡಿಗೆ ವಿಸ್ತರಿಸಿದ್ದರು ಎಂದು ತಿಳಿದು ಬರುತ್ತದೆ.

ತುಳುನಾಡಿನ ಸ್ಥಳೀಯ ರಾಜಕೀಯ ಇತಿಹಾಸವನ್ನು ಗಮನಿಸಿದಾಗ ಇಲ್ಲಿ ಯಾವುದೇ ಪ್ರಬಲ ರಾಜನು ಅಥವಾ ಪ್ರಬಲ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬರದೆ, ಶತಮಾನಗಳಿಂದಲೂ ಸಾಮಂತ ಅರಸು ಮನೆತನಗಳೇ ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ. ತುಳುನಾಡನ್ನು ಆಳಿದ ಮೊದಲ ರಾಜವಂಶವೆಂದರೆ ಅಳುಪರು, ಇವರು ಕ್ರಿ.ಶ ಎರಡನೇ ಶತಮಾನದಿಂದ ಹದಿನಾಲ್ಕನೇ ಶತಮಾನದವರೆಗೆ ಸುಮಾರು 1200 ವರ್ಷಗಳವರೆಗೆ ಆಳ್ವಿಕೆಯನ್ನು ನಡೆಸಿದರು. ಕ್ರಿ. ಶ ಏಳನೇ ಶತಮಾನದ ನಂತರ ಅಳುಪರ ಇತಿಹಾಸದ ಕುರಿತು ನಿರಂತರ ಮಾಹಿತಿ ದೊರಕಿದ್ದು, ಇವರು ಉದಯಪುರ, ಬಾರಕೂರು, ಮಂಗಳಪುರವನ್ನು ರಾಜಧಾನಿಯಾಗಿ ಮಾಡಿಕೊಂಡು ಸುದೀರ್ಘ ಆಳ್ವಿಕೆಯನ್ನು ಮಾಡಿದರು. ಈ ವಂಶದಲ್ಲಿ ಸುಮಾರು 33 ರಾಜರು ಆಳ್ವಿಕೆಯನ್ನು ನಡೆಸಿದ್ದು, ಇವರ ಆಳ್ವಿಕೆಯು ದಕ್ಷಿಣ ಕನ್ನಡಕ್ಕೆ ಮಾತ್ರ ಸೀಮಿತವಾಗಿರದೇ ಉತ್ತರಕನ್ನಡಕ್ಕೂ ವ್ಯಾಪಿಸಿತ್ತು. ಇವರು ಶತಮಾನಗಳಿಂದಲೂ ಸ್ವತಂತ್ರ ಅರಸರಾಗಿರದೆ, ಸಾಮಂತ ಅರಸರಾಗಿ ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ. ಕರ್ನಾಟಕದ ಮೊದಲ ರಾಜವಂಶವೆಂದು ಗುರುತಿಸಲ್ಪಡುವ ಕದಂಬರು ತುಳುನಾಡಿನ ಮೇಲೆ ಸಂಪೂರ್ಣವಾದ ಹಿಡಿತವನ್ನು ಹೊಂದಿದ್ದ ಸಂದರ್ಭದಲ್ಲಿ ಅಳುಪರು ಅವರ ಸಾಮಂತರಾಗಿ ತುಳುನಾಡನ್ನು ಆಳುತ್ತಿದ್ದರು ಎಂದು ಶಾಸನಗಳ ಮೂಲಕ ತಿಳಿದು ಬರುತ್ತವೆ. ಕದಂಬರ ನಂತರ ಕರ್ನಾಟಕವನ್ನು ಆಳಿದ ಪ್ರತಿಯೊಂದು ಪ್ರಮುಖ ರಾಜವಂಶವು ಅಳುಪರನ್ನು ತಮ್ಮ ಅಧೀನದಲ್ಲಿ ಇಟ್ಟುಕೊಂಡಿದ್ದವು. ಅದರಲ್ಲೂ ಹೊಯ್ಸಳರು ತುಳುನಾಡು ಅಥವಾ ಆಳ್ವಖೇಡದ ಮೇಲೆ ಹಿಡಿತವನ್ನು ಹೊಂದಲು ಬಾರಕೂರಿನಲ್ಲಿ ಸೈನಿಕ ನೆಲೆಯನ್ನು ಸ್ಥಾಪಿಸಿದ್ದರು.

ಕರ್ನಾಟಕದಲ್ಲಿ ವಿಜಯನಗರ ಅರಸರ ಸಾರ್ವಭೌಮ ಆಳ್ವಿಕೆಯು ಪ್ರಾರಂಭವಾದಾಗ ತುಳುನಾಡಿನಲ್ಲಿ ಅಳುಪರು ಅವನತಿಯತ್ತ ಸಾಗಿದ್ದರು. ತುಳುನಾಡಿನ ಹೆಚ್ಚಿನ ಭಾಗಗಳಲ್ಲಿ ಹಲವು ಸ್ಥಳೀಯ ಅರಸು ಮನೆತನಗಳು ತಲೆ ಎತ್ತಿದವು. ಇಲ್ಲಿ ಆಳ್ವಿಕೆ ಮಾಡಿದ ಸ್ಥಳೀಯ ಅರಸು ಮನೆತನಗಳಲ್ಲಿ ಕಳಸ-ಕಾರ್ಕಳದ ಭೈರರಸ ಒಡೆಯರು, ಗೇರುಸೊಪ್ಪೆ ಹಾಗೂ ಹಾಡುವಳ್ಳಿಯಲ್ಲಿ ಸಾಳುವರು, ಉಡುಪಿಯ ಸೂರಾಲಿನ ತೋಳಹರು, ಹೊಸಂಗಡಿಯ ಹೊನ್ನೆಯ ಕಂಬಳಿಯರಸರು, ಕುಂಬಳೆಯ ಅರಸರು, ಪುತ್ತಿಗೆ-ಮೂಡಬಿದರೆಯ ಚೌಟ ಅರಸರು, ಬಂಗಾಡಿಯ ಬಂಗರು, ಮೂಲಿಕೆಯ ಸಾವಂತರಸರು, ವೇಣೂರಿನ ಅಜಿಲರು ಮತ್ತು ವಿಟ್ಲದ ಡೊಂಬ ಹೆಗ್ಗಡೆ ಅರಸರು ಪ್ರಮುಖರಾಗಿದ್ದಾರೆ. ಇಷ್ಟೇ ಅಲ್ಲದೇ ಬಲಾಡ್ಯ ಬಲ್ಲಾಳರು, ಹೆಗ್ಗಡೆಯವರು ಮತ್ತು ಇನ್ನಿತರ ಪಾಳೇಯಗಾರರು ಇಲ್ಲಿ ಆಳ್ವಿಕೆ ಮಾಡುತ್ತಿದ್ದರು. ವಿಜಯನಗರ ಅರಸರು

ತುಳುನಾಡಿನ ಎಲ್ಲಾ ತುಂಡರಸರನ್ನು ತಮ್ಮ ಅಧೀನದಲ್ಲಿಟ್ಟುಕೊಂಡಿದ್ದು, ಅವರನ್ನು ಸಮರ್ಪಕವಾಗಿ ನಿಯಂತ್ರಿಸಲು ತುಳುನಾಡನ್ನು ಮಂಗಳೂರು ಮತ್ತು ಬಾರಕೂರು ಎಂಬ ಪ್ರಾಂತ್ಯಗಳಾಗಿ ವಿಭಾಗಿಸಿ, ಎರಡೂ ಪ್ರಾಂತ್ಯಗಳಿಗೆ 'ರಾಜ್ಯಪಾಲ'ರನ್ನು ನೇಮಿಸಿದ್ದರು. ವಿಜಯನಗರ ಸಾಮ್ರಾಜ್ಯವು ಅವನತಿಯತ್ತ ಸಾಗಿದಾಗ ತುಳುನಾಡಿನ ಮೇಲೆ ಕೆಳದಿ ನಾಯಕರು ಬಿಗಿ ಹಿಡಿತವನ್ನು ಹೊಂದಲಾರಂಭಿಸಿದರು. ಇದರಿಂದಾಗಿ ತುಳುನಾಡಿನ ಹಲವು ಸ್ಥಳೀಯ ರಾಜಮನೆತನಗಳು ಮೂಲೆ ಗುಂಪಾದವು. ಕೆಳದಿ ನಾಯಕರ ಆಳ್ವಿಕೆಯಲ್ಲಿ ಮೊದಲಿದ್ದ ಮಂಗಳೂರು ಮತ್ತು ಬಾರಕೂರು ಪ್ರಾಂತ್ಯಗಳು ಒಂದಾಗಿ ದಕ್ಷಿಣ ಕನ್ನಡವು ತುಳುರಾಜ್ಯವೆಂದು ಕರೆಯಲ್ಪಟ್ಟಿತು. ಕೆಳದಿ ನಾಯಕರು ತಮ್ಮ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಿದ್ದಂತೆ ತುಳುನಾಡು ಮೈಸೂರಿನ ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನ್‌ನ ಆಳ್ವಿಕೆಗೆ ಒಳಪಟ್ಟಿತು. ಇವರು ಸ್ಥಳೀಯ ತುಂಡರಸರನ್ನು ಹಾಗೂ ಪಾಳೇಯಗಾರರನ್ನು ಮೂಲೆ ಗುಂಪು ಮಾಡಿದರು. ಕ್ರಿ. ಶ 1799ರಲ್ಲಿ ತುಳುನಾಡು ಬ್ರಿಟೀಷರ ವಶವಾಯಿತು. ಇವರು ಈ ಪ್ರದೇಶವನ್ನು ಕೆನರಾ ಎಂದು ಕರೆಯುತ್ತಿದ್ದು, ಈ ಪ್ರದೇಶವನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿದರು. ಕ್ರಿ. ಶ 1861ರಲ್ಲಿ ಉತ್ತರಕನ್ನಡವನ್ನು ಪ್ರತ್ಯೇಕಿಸಿ ಬೊಂಬಾಯಿ ಪ್ರೆಸಿಡೆನ್ಸಿಗೆ ಸೇರಿಸಿದರು. ಭಾರತ ಸ್ವತಂತ್ರಗೊಂಡು ಭಾಷಾವಾರು ನೆಲೆಯಲ್ಲಿ ರಾಜ್ಯಗಳನ್ನು ಪುನರ್ ರಚನೆ ಮಾಡುವ ಸಂದರ್ಭದಲ್ಲಿ ತುಳುನಾಡಿನ ಭಾಗವಾಗಿದ್ದ ಕಾಸರಗೋಡು ಕರ್ನಾಟಕದ ಕೈ ತಪ್ಪಿ ಕೇರಳರಾಜ್ಯಕ್ಕೆ ಸೇರಿಕೊಂಡಿತು. ಕ್ರಿ.ಶ 1997ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ವಿಭಜನೆಗೊಂಡು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳೆಂಬ ಎರಡು ಜಿಲ್ಲೆಗಳಾದವು.

ತುಳುನಾಡಿನಲ್ಲಿ ಅಳುಪರ ಹಾಗೂ ವಿಜಯನಗರ ಅರಸರ ಆಡಳಿತ

ಅಳುಪರ ರಾಜ್ಯವು ನಾಡುಗಳೆಂಬ ಉಪವಿಭಾಗಗಳನ್ನು ಒಳಗೊಂಡಿದ್ದು ಅವುಗಳ ಆಡಳಿತ ನಿರ್ವಹಣೆಯನ್ನು 'ನಾಟ್ಟು ಮುದುಮೆ' ಎಂದು ಕರೆಯುತ್ತಿದ್ದರು ಎಂದು ಶಾಸನಗಳಿಂದ ತಿಳಿದು ಬರುತ್ತದೆ.[1] ಏಳನೇ ಶತಮಾನಕ್ಕೆ ಸೇರಿದ ವಡ್ಡರ್ಸೆ ಶಾಸನವು ಅಳುಪ ಆಳ್ವರಸನು ಆಳುತ್ತಿರುವಾಗ ರಾಜ್ಯದ ನಂಬಿಕಸ್ತ ಸೇವಕನಾದ ಗುಂಡಣ್ಣನೆಂಬವನು 'ನಾಟ್ಟು ಮುದುಮೆ' ಮಾಡುತ್ತಿದ್ದ ಮಾಹಿತಿಯನ್ನು ನೀಡುತ್ತದೆ. ಅದೇ ಶಾಸನವು ಪಡುವಲಿಯ-ನಾಡು ಮತ್ತು ಅದರ ನಾಟ್ಟು ಮುದುಮೆಯ ಕುರಿತಾದ ಮಾಹಿತಿಯನ್ನು ನೀಡುತ್ತದೆ.

[1] ಪಿ. ಗುರುರಾಜ ಭಟ್, ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್, ಪುಟ 143

ಹಾಗೆಯೇ ಇನ್ನೂ ಹಲವು ಶಾಸನಗಳು ನಾಡುಗಳ ಆಡಳಿತದ ಕುರಿತಾಗಿ ಬೆಳಕು ಚೆಲ್ಲುತ್ತದೆ.[2] ನಾಡುಗಳನ್ನು 'ಊರು', 'ಗ್ರಾಮ'ಗಳೆಂದು ವಿಭಾಗಿಸಲಾಗಿತ್ತು.[3] ಆಡಳಿತದಲ್ಲಿ ಊರು ಎಂಬುದು ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು ವಿಶಾಲವಾದ ಆಡಳಿತ ಘಟಕವಾಗಿದ್ದು, ಅದರ ಆಡಳಿತ ಅಧಿಕಾರಿಯನ್ನು ನಾಯ್ಗರೆಂದು ಕರೆಯಲಾಗುತ್ತಿತ್ತು. 'ಗ್ರಾಮ'ವು ಕೊನೆಯ ಆಡಳಿತ ಘಟಕವಾಗಿತ್ತು. 'ಪೆರ್ಗಡೆ', 'ಅಧಿಕಾರಿ' ಅಥವಾ 'ಅತಿಕಾರಿ', 'ಸೇನಬೋವ' 'ಗ್ರಾಮಣಿ' ಎಂಬ ಅಧಿಕಾರಿಗಳು ಗ್ರಾಮದ ಆಡಳಿತದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು. 'ಅಧಿಕಾರಿ' ಅಥವಾ 'ಅತಿಕಾರಿ'ಯು ಎರಡು ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದು, ಊರಿನ ದೇವಾಲಯಗಳ ಉಸ್ತುವಾರಿ, ಗ್ರಾಮ ಮತ್ತು ಗುತ್ತುಗಳಿಂದ ತೆರಿಗೆ ಸಂಗ್ರಹ ಮಾಡುವುದು ಅವನ ಜವಾಬ್ದಾರಿಯಾಗಿತ್ತು. ಊರು ಮತ್ತು ಗ್ರಾಮ ಎಂಬ ಆಡಳಿತ ಘಟಕಗಳು ಸ್ಥಳೀಯ ಆಡಳಿತದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದವೆಂದು ಶಾಸನಗಳಿಂದ ತಿಳಿಯಬಹುದು.[4] ಕ್ರಿ.ಶ 1267ರ ಪುತ್ತಿಗೆ ಶಾಸನವು ಊರಿನ ಆಡಳಿತ ಮುಖ್ಯಸ್ಥರ ಬಗ್ಗೆ ಸಂಕ್ಷಿಪ್ತವಾದ ಮಾಹಿತಿಯನ್ನು ನೀಡುತ್ತದೆ.[5]

ತುಳುನಾಡಿನ ರಾಜಕೀಯದಲ್ಲಿ ವಿಜಯನಗರ ಅರಸರ ಹಸ್ತಕ್ಷೇಪವು ತುಳುನಾಡಿನ ಆಡಳಿತದಲ್ಲಿ ಹೊಸ ಯುಗವನ್ನು ಪ್ರಾರಂಭಿಸಿತು. ವಿಜಯನಗರ ಅರಸರ ಆಳ್ವಿಕೆಯಲ್ಲಿ ತುಳುನಾಡಿನ ಆಡಳಿತ ವ್ಯವಸ್ಥೆಯಲ್ಲಿ ಕೇಂದ್ರೀಕರಣ ಮತ್ತು ವಿಕೇಂದ್ರಿಕರಣ ಲಕ್ಷಣಗಳು ಕಾಣಿಸಲಾರಂಭಿದವು. ವಿಜಯನಗರ ಅರಸರು ಸುಗಮ ಆಡಳಿತದ ದೃಷ್ಟಿಯಿಂದ ತುಳುದೇಶವನ್ನು[6] ಮಂಗಳೂರು ರಾಜ್ಯ ಮತ್ತು ಬಾರಕೂರು ರಾಜ್ಯ ಎಂಬ ಪ್ರಾಂತ್ಯಗಳಾಗಿ ವಿಂಗಡಿಸಿ, ಈ ಎರಡು ಪ್ರಾಂತ್ಯಗಳಿಗೆ ಎರಡು ರಾಜ್ಯಪಾಲರನ್ನು ನೇಮಿಸಿದ್ದರು.[7] ಮಂಗಳೂರಿನಲ್ಲಿದ್ದ ವಿಜಯನಗರದ ರಾಜ್ಯಪಾಲನಿಗೆ ತುಳುನಾಡಿನ ಒಳಾಡಳಿತದ ಮೇಲೆ ಸಂಪೂರ್ಣವಾದ ಹತೋಟಿ ಇರಲಿಲ್ಲ. ತುಳುನಾಡಿನ ನಿಜವಾದ ಆಡಳಿತ ಘಟಕವೆಂದರೆ ಬಂಗರು, ಚೌಟರು, ಅಜಿಲರು

---

[2] ಅದೇ, ಪುಟ 143

[3] ಅದೇ, ಪುಟ 144

[4] ಡಾ. ಶೈಲ ಟಿ ವರ್ಮ, ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟಗಳು 136-138

[5] SII ಸಂಪುಟ VII, No 354

[6] ವಿಜಯನಗರ ಅರಸರ ಆಳ್ವಿಕೆಯ ಅವಧಿಯಲ್ಲಿ ಪ್ರಾಂತ್ಯಗಳನ್ನು ರಾಜ್ಯ, ಮಂಡಲ, ದೇಶಗಳೆಂದು ಕರೆಯುತ್ತಿದ್ದರು. ಶಾಸನಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಇಡೀ ತುಳುನಾಡನ್ನು ತುಳು-ದೇಶ, ತುಳು-ರಾಜ್ಯ ಅಥವಾ ತುಳು ಮಂಡಲ ಎಂದು ಉಲ್ಲೇಖಿಸಲಾಗಿದೆ. ಪಿ. ಗುರುರಾಜ ಭಟ್, ಹಿಂದೆ ಉಲ್ಲೇಖಿತ, ಪುಟಗಳು 144-145

[7] ಅದೇ, ಪುಟ 145

ಮುಂತಾದ ಸ್ಥಳೀಯ ರಾಜರು ಆಳ್ವಿಕೆ ಮಾಡುತ್ತಿದ್ದ ಪ್ರದೇಶಗಳಾಗಿದ್ದವು. ದಕ್ಷಿಣ ಕನ್ನಡದ ಬೇರೆ ಬೇರೆ ಭಾಗಗಳಲ್ಲಿ ಸ್ಥಳೀಯ ತುಂಡರಸ ರಾಜಮನೆತನಗಳಾದ ಬಂಗರು, ಚೌಟರು, ಮದ್ದ ಹೆಗ್ಗಡೆಯವರು, ಕಿನ್ನಿಕಾ ಹೆಗ್ಗಡೆಯವರು, ಭೈರರಸರು, ಅಜಿಲರಸರು, ಸಾವಂತರಸರು ಮೊದಲಾದವರು ಸ್ಥಳೀಯವಾಗಿ ಸ್ವಾಯತ್ತತೆಯನ್ನು ಹೊಂದಿದ್ದರು. ಇವರು ವಿಜಯನಗರ ರಾಜ್ಯಪಾಲರಿಗೆ ಆಡಳಿತದಲ್ಲಿ ಸಹಕರಿಸಿದ್ದರು ಮಾತ್ರವಲ್ಲದೇ ಆಡಳಿತದಲ್ಲಿ ಹೊಣೆಯನ್ನೂ ವಹಿಸಿಕೊಂಡಿದ್ದರು.

ವಿಜಯನಗರ ಅರಸರ ಆಡಳಿತದಲ್ಲಿ ಪ್ರಾಂತ್ಯಗಳನ್ನು ರಾಜ್ಯ, ಮಂಡಲ, ದೇಶಗಳೆಂದು ಕರೆಯುತ್ತಿದ್ದರು. ದೇಶ, ರಾಜ್ಯ, ಮಂಡಲ, ಸ್ಥಳ, ಸ್ಥಳ-ನಾಡುಗಳನ್ನು ಅನೇಕ ಬಾರಿ ಒಂದಕ್ಕೊಂದು ಪರ್ಯಾಯವಾಗಿ ಬಳಸಲಾಗುತ್ತಿತ್ತು. ಮಂಡಲಗಳನ್ನು ನಾಡು ಅಥವಾ ಸೀಮೆ ಎಂದು ವಿಂಗಡಿಸಲಾಗಿತ್ತು. ವಿಜಯನಗರದ ಆಡಳಿತದ ಸಂದರ್ಭದ ತುಳುನಾಡಿನ ವಿವಿಧ ಹಂತದ ಆಡಳಿತ ಘಟಕಗಳೆಂದರೆ ದೇಶ, ರಾಜ್ಯ, ಮಂಡಲ, ಸ್ಥಳ, ಸ್ಥಳ-ನಾಡು, ಸೀಮೆ, ನಾಡು, ಮಾಗಣೆ, ಗ್ರಾಮ, ಊರು, ಚಾವಡಿ, ಗುತ್ತುಗಳು. ವಿಜಯನಗರ ಅರಸರು ತುಳುನಾಡನ್ನು ಹಲವು ನಾಡುಗಳಾಗಿ ವಿಭಾಗಿಸಿದ್ದರು. ಅವುಗಳ ಪೂರ್ಣ ಚಿತ್ರಣವು ಶಾಸನಗಳ ಮೂಲಕ ಸಿಗುವುದಿಲ್ಲವಾದರೂ ನಾಡು ಎಂಬ ಆಡಳಿತ ವಿಭಾಗವು ಸ್ಥಳೀಯ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿತ್ತು. ನಾಡು ಶ್ರೇಣೀಕೃತ ಆಡಳಿತ ವ್ಯವಸ್ಥೆಯನ್ನು ಹೊಂದಿತ್ತು.[8] ಮಾಗಣೆಯು ಸೀಮೆ ಅಥವಾ ನಾಡುವಿನ ಉಪವಿಭಾಗವಾಗಿತ್ತು. ಹಲವಾರು ಗ್ರಾಮಗಳು ಸೇರಿರುವ ಆಡಳಿತ ಘಟಕಗಳನ್ನು ಮಾಗಣೆ ಎಂಬುದಾಗಿ ಕರೆಯಲಾಗುತ್ತಿತ್ತು. ಮಾಗಣೆಗಳಲ್ಲಿ ಬಲ್ಲಾಳರು ಹಾಗೂ ಹೆಗ್ಗಡೆಯವರು ಕಾರ್ಯನಿರ್ವಹಿಸುತ್ತಿದ್ದರು.[9] ಶಾಸನಗಳಲ್ಲಿ ‘ಚಾವಡಿ’ ಎಂಬ ಉಲ್ಲೇಖಗಳು ಸಿಗುತ್ತವೆ. ‘ಚಾವಡಿ’ಯು ಇಡೀ ಸೀಮೆಯಲ್ಲಿ ಪ್ರಾಮುಖ್ಯತೆಯನ್ನು ಹೊಂದಿದ್ದು ಅಲ್ಲಿ ಸೀಮೆ ಮಟ್ಟದ ಸಭೆಯು ಸೇರುತ್ತಿತ್ತು. ಇಲ್ಲಿ ಗ್ರಾಮ ಮಟ್ಟದಲ್ಲಿ ಪರಿಹಾರವಾಗದ ಕಲಹಗಳನ್ನು ಪರಿಹರಿಸಲಾಗುತ್ತಿತ್ತು.[10]

ತುಳುನಾಡಿನ ಆಡಳಿತವು ಗ್ರಾಮಗಳಲ್ಲಿ ಕೇಂದ್ರಿಕೃತವಾಗಿತ್ತು. ಗ್ರಾಮ ಮತ್ತು ಊರು ಎಂಬುದು ಪುರಾತನ ಕಾಲದಿಂದಲೂ ಇದ್ದಂತಹ ಆಡಳಿತ ಘಟಕಗಳಾಗಿದ್ದವು. ಗ್ರಾಮವು ಕೆಲವು ಊರುಗಳನ್ನು

---

[8] ಪಿ. ಗುರುರಾಜ ಭಟ್, ಹಿಂದೆ ಉಲ್ಲೇಖಿತ, ಪುಟ 147

[9] ಅದೇ, ಪುಟ 148

[10] ಅದೇ, ಪುಟ 149

ಒಳಗೊಂಡಿದ್ದವು. ತುಳುವ ಸ್ಥಳೀಯ ಆಡಳಿತದ ವಿಶಿಷ್ಟ ಲಕ್ಷಣವೆಂದರೆ(ದಕ್ಷಿಣ ಕನ್ನಡ ಜಿಲ್ಲೆಗೆ ವಿಶೇಷವಾಗಿ) ಗ್ರಾಮಗಳನ್ನು ಗುತ್ತುಗಳಾಗಿ ವಿಂಗಡಿಸಲಾಗಿತ್ತು. ಒಂದು ಗ್ರಾಮವು ಒಂದರಿಂದ ನಾಲ್ಕು ಮತ್ತು ಅಪರೂಪಕ್ಕೆ ಎಂಟು ಗುತ್ತುಗಳನ್ನು ಒಳಗೊಂಡಿತ್ತು.[11] ಗುತ್ತುಗಳು ಪ್ರಮುಖವಾಗಿ ಆರ್ಥಿಕ ಘಟಕಗಳಾಗಿದ್ದರೂ, ಗ್ರಾಮಾಡಳಿತದಲ್ಲಿ ಗುತ್ತುಗಳು ಪ್ರಮುಖ ಪಾತ್ರವನ್ನು ಹೊಂದಿದ್ದು, ಇವುಗಳು ನಿರ್ದಿಷ್ಟ ಅಧಿಕಾರಗಳನ್ನು ಪಡೆದಿದ್ದವು.[12] ಆಡಳಿತದ ಶ್ರೇಣಿಯಲ್ಲಿ ಕೊನೆಯ ಹಂತದಲ್ಲಿ ಬರುವ ಗುತ್ತು ಸ್ಥಳೀಯ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿತ್ತು.

ಗ್ರಾಮಾಡಳಿತವು ಗ್ರಾಮ ಗುತ್ತು, ಮಾಗಣೆ ಗುತ್ತು, ಸೀಮೆ ಗುತ್ತು ಎಂದು ಶ್ರೇಣೀಕೃತಗೊಂಡಿತ್ತು. ಒಂದು ಸೀಮೆಗೆ ನಾಲ್ಕು ಪ್ರಧಾನ ಗುತ್ತುಗಳಿರುತ್ತಿದ್ದವು. ಇವುಗಳನ್ನು ಸೀಮೆ ಗುತ್ತು ಅಥವಾ ರಾಜಗುತ್ತು ಎಂದು ಕರೆಯಲಾಗುತ್ತಿತ್ತು. ಇವುಗಳಿಗೆ ಪೂರಕವಾಗಿ ಮಾಗಣೆ ಗುತ್ತುಗಳಿರುತ್ತಿದ್ದವು. ಪ್ರತೀ ಮಾಗಣೆಗೆ ಒತ್ತು ಗುತ್ತುಗಳಿರುತ್ತಿದ್ದವು. ಗುತ್ತೇದಾರನು ಅನುವಂಶಿಕವಾಗಿ ಇವುಗಳ ಮೇಲೆ ಹಿಡಿತವನ್ನು ಹೊಂದಿದ್ದನು. ವಿಜಯನಗರ ಅರಸರ ಆಳ್ವಿಕೆಯ ನಂತರ ಮತ್ತು ವಸಾಹತು ಕಾಲದ ಸ್ಥಳೀಯಾಡಳಿತವನ್ನು ಗಮನಿಸಿದಾಗ ಈ ಸಾಂಪ್ರದಾಯಿಕ ಆಡಳಿತ ವ್ಯವಸ್ಥೆಯು ಮುಂದುವರಿಯುದನ್ನು ಗುರುತಿಸಬಹುದು. ಗ್ರಾಮ ಮತ್ತು ಮಾಗಣೆ ಮಟ್ಟದಲ್ಲಿ ಗುತ್ತುಗಳು ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು. ಗುತ್ತುಗಳು ಕೇವಲ ಭೂಮಾಲೀಕರ ಮನೆಗಳಾಗಿರದೇ ತುಳುನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತಿದ್ದವು.

ಪ್ರಸ್ತುತ ಅಧ್ಯಯನವು ತುಳುನಾಡಿನ ಸಮಾಜದಲ್ಲಿ ಪರಂಪರಾಗತವಾಗಿ ನಿರ್ಣಾಯಕ ಪಾತ್ರವಹಿಸುತ್ತಿದ್ದ ಗುತ್ತುಮನೆಗಳ ಹುಟ್ಟು, ವಿಕಾಸ, ಗುತ್ತು ಮನೆಗಳ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ಒಳಗೊಂಡಿದೆ.

---

[11] ಅದೇ, ಪುಟ 149

[12] ಅದೇ, ಪುಟ 149

1.2 ಅಧ್ಯಯನದ ಶೀರ್ಷಿಕೆ: 'ತುಳುನಾಡಿನ ಗುತ್ತುಗಳು: ಇತಿಹಾಸ, ಸಂಸ್ಕೃತಿ ಮತ್ತು ಸ್ಥಿತ್ಯಂತರಗಳು'

ಇಲ್ಲಿಯವರೆಗೆ ನಡೆದ ಅಧ್ಯಯನಗಳನ್ನು ಅವಲೋಕಿಸಿದಾಗ ತುಳುನಾಡಿನಲ್ಲಿರುವ ಗುತ್ತುಮನೆಗಳ ಬಗ್ಗೆ ಬಿಡಿ ಬಿಡಿಯಾದ ಸಂಶೋಧನಾ ಕಾರ್ಯಗಳು ನಡೆದಿರುವುದು ಕಂಡು ಬರುತ್ತದೆ. ಕೆಲವು ಅಧ್ಯಯನಗಳಲ್ಲಿ ಒಂದು ಸಮುದಾಯವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಅದರ ಭಾಗವಾಗಿ ಗುತ್ತುಮನೆಗಳ ಅಧ್ಯಯನ ನಡೆದಿರುತ್ತವೆ. ಈ ಎಲ್ಲಾ ಅಧ್ಯಯನಗಳಲ್ಲಿ ಗುತ್ತು ಮನೆಗಳ ಕುರಿತಾದ ಹಲವಾರು ವಿಷಯಗಳು ಒಳಗೊಂಡಿರುದಿಲ್ಲ. ಗುತ್ತು ಸಮಾಜವು ಹಲವು ವೈಶಿಷ್ಟ್ಯ ಪೂರ್ಣ ಲಕ್ಷಣಗಳನ್ನು ಒಳಗೊಂಡಿದೆ. ಗುತ್ತುವಿನ ಪ್ರತಿಯೊಂದೂ ಚಟುವಟಿಕೆಯಲ್ಲಿ ಸಮಾಜದ ವಿವಿಧ ಜಾತಿ ಸಮುದಾಯಗಳು ನಿರ್ವಹಿಸಬೇಕಾದ ಕರ್ತವ್ಯಗಳಿದ್ದವು. ಗುತ್ತುಗಳು ಶ್ರೀಮಂತ ಪರಂಪರೆ ಹಾಗೂ ಸಂಪ್ರದಾಯಗಳನ್ನು ಒಳಗೊಂಡಿವೆ. ದೈವಾರಾಧನೆ, ದೈವಸ್ಥಾನಗಳು ಹಾಗೂ ದೇವಾಲಯಗಳ ನಿರ್ವಹಣೆಯಲ್ಲಿ ಗುತ್ತುಗಳ ಪಾತ್ರವು ಹಿರಿದಾಗಿವೆ. ಗುತ್ತುಮನೆ ಮತ್ತು ಕೃಷಿಗೂ ಅವಿನಾಭಾವ ಸಂಬಂಧವಿದ್ದು, ಕೃಷಿ ಜಗತ್ತಿನೊಂದಿಗೆ ಬೆರೆತುಕೊಂಡ ಸಾಮಾಜಿಕ ಸಂಬಂಧವನ್ನು ನಾವಿಲ್ಲಿ ಕಾಣಬಹುದು. ಗುತ್ತುಮನೆಗಳ ಐತಿಹಾಸಿಕ ಹಿನ್ನೆಲೆ, ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗುತ್ತುಮನೆಗಳ ಪಾತ್ರಗಳ ಕುರಿತಾಗಿ ಒಂದೇ ಶೀರ್ಷಿಕೆ ಅಡಿಯಲ್ಲಿ ಸಮಗ್ರವಾದ ಅಧ್ಯಯನವು ನಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ತುಳುನಾಡಿನ ಕುರಿತಾದ ಅಧ್ಯಯನದಲ್ಲಿ **'ತುಳುನಾಡಿನ ಗುತ್ತುಗಳು: ಇತಿಹಾಸ, ಸಂಸ್ಕೃತಿ ಮತ್ತು ಸ್ಥಿತ್ಯಂತರಗಳು'** ಎಂಬ ವಿಷಯದ ಕುರಿತಾದ ಅಧ್ಯಯನವು ಪ್ರಮುಖವಾಗುತ್ತದೆ.

1.3 ಅಧ್ಯಯನದ ಉದ್ದೇಶಗಳು:

- ಗುತ್ತುಮನೆಗಳ ಅರ್ಥ, ಮೂಲವನ್ನು ಅರ್ಥೈಸಿಕೊಳ್ಳುವುದು.
- ಗುತ್ತುಮನೆಗಳ ಚಾರಿತ್ರಿಕ ಹಿನ್ನೆಲೆಯನ್ನು ತಿಳಿಯುವುದು.
- ತುಳುನಾಡಿನ ಅರಸು ಮನೆತನಗಳ ಹಿನ್ನೆಲೆ ಮತು ಆಳ್ವಿಕೆಯನ್ನು ಗ್ರಹಿಸುವುದು.
- ಪ್ರಭುತ್ವ ಮತ್ತು ಗುತ್ತು ಮನೆಗಿರುವ ಸಂಬಂಧವನ್ನು ವಿಶ್ಲೇಷಿಸುವುದು.
- ತುಳುನಾಡಿನ ಸಮಾಜದಲ್ಲಿ ಪ್ರಬಲ ಸಮುದಾಯಗಳ ಪಾತ್ರವನ್ನು ಅರ್ಥೈಸಿಕೊಳ್ಳುವುದು.

- ತುಳುನಾಡಿನ ಪ್ರಭುತ್ವ, ಅಧಿಕಾರದ ಹಿನ್ನೆಲೆಯಲ್ಲಿ ವಿವಿಧ ಸಮುದಾಯಗಳನ್ನು ಅರ್ಥೈಸಿಕೊಳ್ಳುವುದು.
- ತುಳುನಾಡಿನ ಸಮಾಜದಲ್ಲಿ ಗುತ್ತುಮನೆಗಳ ಪ್ರಾಮುಖ್ಯತೆಯನ್ನು ಅರ್ಥೈಸಿಕೊಳ್ಳುವುದು.
- ಗುತ್ತುಮನೆಯ ಅಸ್ಮಿತೆಗಳನ್ನು ತಿಳಿದುಕೊಳ್ಳುವುದು.
- ಗುತ್ತುಮನೆ ಹಾಗೂ ಗ್ರಾಮದ ನಡುವೆ ಇದ್ದ ಸಂಬಂಧವನ್ನು ಅರ್ಥೈಸಿಕೊಳ್ಳುವುದು.
- ಸಮಾಜದೊಂದಿಗೆ ಗುತ್ತು ಮನೆಯ ಸಂಬಂಧವನ್ನು ತಿಳಿಯುವುದು.
- ಗುತ್ತು ಮನೆಗಳ ಸಂಪ್ರದಾಯಗಳನ್ನು ತಿಳಿಯುವುದು.
- ಗುತ್ತು ಮನೆಗಳ ಆಚರಣೆಗಳನ್ನು ತಿಳಿಯುವುದು.
- ಗುತ್ತು ಮನೆಗಳಲ್ಲಿ ಆದ ಸ್ಥಿತ್ಯಂತರಗಳನ್ನು ಗುರುತಿಸುವುದು.
- ಗುತ್ತುಮನೆಗಳ ಪ್ರಸ್ತುತ ಸ್ಥಿತಿಗತಿಗಳನ್ನು ತಿಳಿಯುವುದು.

ಈ ಅಧ್ಯಯನವು ಮೇಲಿನ ಉದ್ದೇಶಗಳ ಜೊತೆಗೆ ಗುತ್ತು ಮನೆಗಳು ಮತ್ತು ಕೃಷಿಯ ನಡುವಿನ ಬಾಂಧವ್ಯ, ಗುತ್ತುಮನೆಗಳ ಇತರ ಆರ್ಥಿಕ ಚಟುವಟಿಕೆಗಳು, ಗುತ್ತುಮನೆಗಳ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳುವಿಕೆ, ಗುತ್ತು ಮನೆಗಳು ಮತ್ತು ಸಾಮಾಜಿಕ ಪಿಡುಗುಗಳು, ಗುತ್ತುಮನೆಯಲ್ಲಿ ಮಹಿಳೆಯ ಸ್ಥಾನ, ಗುತ್ತುಮನೆಗಳ ಮನೋರಂಜನೆಗಳು, ಸಾಂಸ್ಕೃತಿಕ ಕೊಡುಗೆಗಳ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ.

1.4 ಅಧ್ಯಯನದ ವ್ಯಾಪ್ತಿ:

'ತುಳುನಾಡಿನ ಗುತ್ತುಗಳು: ಇತಿಹಾಸ, ಸಂಸ್ಕೃತಿ ಮತ್ತು ಸ್ಥಿತ್ಯಂತರಗಳು' ಎಂಬ ಅಧ್ಯಯನದಲ್ಲಿ ತುಳುನಾಡಿನ ಗುತ್ತು ಸಮಾಜಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನು ಚರ್ಚಿಸಲಾಗಿದೆ. ಕರಾವಳಿ ಜಿಲ್ಲೆಯ ಗುತ್ತುಮನೆಗಳ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ಅಧ್ಯಯನ ಮಾಡಲಾಗಿದೆ. ತುಳುನಾಡಿನಲ್ಲಿ ವಿಜಯನಗರ ಅರಸರ ಕಾಲದಿಂದ ಗುತ್ತುಗಳು ಪ್ರಾಬಲ್ಯಕ್ಕೆ ಬಂದ ಕಾರಣ ಹಾಗೂ ಈಗಲೂ ಗುತ್ತುಮನೆಗಳು ಅಸ್ತಿತ್ವದಲ್ಲಿರುವುದರಿಂದ, ಪ್ರಸ್ತುತ ಅಧ್ಯಯನವು ವಿಜಯನಗರ ಕಾಲದಿಂದ ಪ್ರಾರಂಭವಾಗಿ ಪ್ರಸ್ತುತ ಕಾಲವನ್ನು ಒಳಗೊಂಡಿದೆ. ಗುತ್ತು ಮನೆಗಳು ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಕಂಡು ಬರುವ ಗುತ್ತುಮನೆಗಳನ್ನು ಒಳಗೊಂಡಿವೆ.

1.5 ಅಧ್ಯಯನದ ಸ್ವರೂಪ

ತುಳುನಾಡಿನ ಗುತ್ತುಮನೆಗಳನ್ನು ಐತಿಹಾಸಿಕ ಹಿನ್ನೆಲೆಯಿಂದ ಅಧ್ಯಯನ ಮಾಡಿ, ಗುತ್ತುಸಮಾಜದ ಪರಂಪರೆ ಮತ್ತು ಸಂಪ್ರದಾಯಗಳನ್ನು ಸಮಗ್ರವಾಗಿ ಅರ್ಥೈಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ತುಳುನಾಡಿನಲ್ಲಿ ಗುತ್ತುಗಳು ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ರಾಜಕೀಯವಾಗಿ ಪ್ರಾಬಲ್ಯತೆಯನ್ನು ಪಡೆದಿದ್ದು, ವಸಾಹತುಪೂರ್ವ ಕಾಲದವರೆಗೂ ರಾಜಕೀಯವಾಗಿ ಗುರುತಿಸಿಕೊಂಡಿದ್ದವು. ಬ್ರಿಟಿಷರು ದಕ್ಷಿಣ ಕನ್ನಡವನ್ನು ವಶಪಡಿಸಿಕೊಂಡ ನಂತರವೂ ಗುತ್ತುಗಳು ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಪ್ರಾಬಲ್ಯವನ್ನು ಮುಂದುವರೆಸಿದ್ದವು. ಸ್ವತಂತ್ರ ಭಾರತವು ಜಾರಿಗೆ ತಂದ ಭೂಸುಧಾರಣೆ ಕಾಯಿದೆಯಿಂದಾಗಿ ಗುತ್ತುಗಳು ಗ್ರಾಮಗಳಲ್ಲಿದ್ದ ತಮ್ಮ ಯಜಮಾನಿಕೆಯನ್ನು ಕಳೆದುಕೊಂಡವು. ಪ್ರಸ್ತುತ ಅಧ್ಯಯನದಲ್ಲಿ ಬೇರೆ ಬೇರೆ ಕಾಲಘಟ್ಟದಲ್ಲಿ ಗುತ್ತುಗಳ ಸ್ಥಾನಮಾನದಲ್ಲಿ ಆದ ಸ್ಥಿತ್ಯಂತರಗಳನ್ನು ಗುರುತಿಸಲಾಗಿದೆ. ತುಳುವ ಸಮಾಜದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಸಮುದಾಯಗಳಾದ ಬ್ರಾಹ್ಮಣರು, ಜೈನರು, ಬಂಟರು ಹಾಗೂ ಬಿಲ್ಲವರ ಕುರಿತಾಗಿ ಅಧ್ಯಯನ ಮಾಡಲಾಗಿದ್ದು, ಪ್ರಭುತ್ವದಲ್ಲಿ ಈ ಸಮುದಾಯಗಳ ಪಾತ್ರ ಹಾಗೂ ಗುತ್ತುಮನೆಗಳಿಗೂ ಹಾಗೂ ಈ ಸಮುದಾಯಗಳ ನಡುವೆ ಇರುವ ಸಂಬಂಧಗಳನ್ನು ಅರ್ಥೈಸಲಾಗಿದೆ. ಗುತ್ತುಗಳು ವೈಶಿಷ್ಟ್ಯಪೂರ್ಣ ಸಾಮಾಜಿಕ ಪರಂಪರೆಯಿಂದ ಕೂಡಿದ್ದು, ಅಲ್ಲಿ ಅನುಸರಿಸುತ್ತಿರುವ ಮಾತೃಮೂಲೀಯ ಅಳಿಯಸಂತಾನ ಪದ್ಧತಿ, ಕುಟುಂಬದ ಮುಖ್ಯಸ್ಥನಾಗಿ ನೇಮಕವಾಗುವಾಗ ವಿಶೇಷವಾಗಿ ನಡೆಯುವ ಆಚರಣಾ ವಿಧಿಗಳು, ಹೆಣ್ಣು ಮಕ್ಕಳ ಆಸ್ತಿಯ ಹಕ್ಕು, ಗುತ್ತುಗಳಲ್ಲಿ ಪುರುಷರ ಹಾಗೂ ಮಹಿಳೆಯರ ಸ್ಥಾನಮಾನಗಳನ್ನು ವಿವರಿಸುವುದರೊಂದಿಗೆ ಪ್ರಸ್ತುತವಾಗಿ ಆ ವ್ಯವಸ್ಥೆಗಳಲ್ಲಿ ಆದ ಬದಲಾವಣೆಗಳನ್ನು ತಿಳಿಸಲಾಗಿದೆ. ಗುತ್ತು ಹಾಗೂ ಸಮಾಜದ ವಿವಿಧ ಸಮುದಾಯಗಳ ನಡುವಿನ ಸಂಬಂಧ, ಗೇಣಿ ಒಕ್ಕಲುಗಳು, ಮೂಲದಾಳುಗಳು ಹಾಗೂ ಗುತ್ತುಗಳ ನಡುವೆ ಸಂಬಂಧವನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ತುಳು ಸಂಸ್ಕೃತಿಯಲ್ಲಿ ತಮ್ಮದೇ ಛಾಪನ್ನು ಮೂಡಿಸುವಲ್ಲಿ ಯಶಸ್ವಿಯಾದ ಗುತ್ತಿನ ಸಾಮಾಜಿಕ ಆಚರಣೆಗಳಾದ ಕಂಬಳ, ದೈವಾರಾಧನೆ, ಆರಾದನಾ ಆಚರಣೆಗಳಾದ ಚೆಂಡು, ತೂಟೆದಾರ, ವರಸರೆಗಳಲ್ಲಿ ಗುತ್ತುಗಳ ನೇತೃತ್ವ, ದೈವಸ್ಥಾನಗಳ ಹಾಗೂ ದೇವಾಲಯಗಳ ನಿರ್ವಹಣೆಯಲ್ಲಿ ಗುತ್ತುಗಳ ಪಾತ್ರ, ಮನೋರಂಜನಾ ಆಚರಣೆಗಳಾದ ಕೋಳಿ ಅಂಕ, ಬೇಟೆಯಲ್ಲಿ ಗುತ್ತುಗಳ ಪಾಲ್ಗೊಳ್ಳುವಿಕೆಯನ್ನು ವಿವರಿಸಲಾಗಿದೆ. ಪ್ರಸ್ತುತ ಅಧ್ಯಯನವನ್ನು ಪ್ರಾಥಮಿಕ ಹಾಗೂ ಮಾಧ್ಯಮಿಕ ಆಕರಗಳನ್ನು ವಿಮರ್ಶಕಾತ್ಮಕವಾಗಿ ಅಧ್ಯಯನ ಮಾಡಿ

ಬಳಸಲಾಗಿದೆ. ಸಂದರ್ಶನ ಹಾಗೂ ಅವಲೋಕನಾ ವಿಧಾನವನ್ನು ವಿಶ್ಲೇಷಣಾತ್ಮಕವಾಗಿ ಬಳಸಿಕೊಂಡು ಗುತ್ತು ಸಮಾಜದ ಸಮಗ್ರ ಚಿತ್ರಣವನ್ನು ತೆರೆದಿಡಲಾಗಿದೆ. ಪ್ರಸ್ತುತ ದಿನಗಳಲ್ಲಿ ಗುತ್ತುಮನೆಗಳು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದು, ಗುತ್ತುಮನೆಗಳಿಗೆ ಸಂಬಂಧಿಸಿದ ಆಚರಣೆಗಳು ಕಳೆಗುಂದಿದ್ದು ಮಾತ್ರವಲ್ಲದೆ, ಆಧುನೀಕರಣ ಹಾಗೂ ತಂತ್ರಜ್ಞಾನದ ಪ್ರಗತಿಯಿಂದಾಗಿ ಯುವಜನರು ತಮ್ಮ ಸಂಪ್ರದಾಯದಿಂದ ವಿಮುಖರಾಗುತ್ತಿದ್ದಾರೆ. ಪ್ರಸ್ತುತ ಅಧ್ಯಯನವು ಇಂದಿನ ಯುವಜನರಲ್ಲಿ ನಮ್ಮ ಸಂಸ್ಕೃತಿಯ ಹಿನ್ನೆಲೆಯನ್ನು ಅರ್ಥೈಸಲು, ಅಳಿದುಳಿದಿರುವ ಗುತ್ತು ಕೇಂದ್ರಿತ ಸಾಮಾಜಿಕ ಆಚರಣೆಗಳನ್ನು ಉಳಿಸುವ ಬೆಳೆಸುವ ಕಾಳಜಿ ಮೂಡಿಸುವಲ್ಲಿ ಉಪಯುಕ್ತವಾಗುತ್ತದೆ.

1.6 ಅಧ್ಯಯನದ ಮಹತ್ವ

ತುಳುನಾಡಿನ ಚಾರಿತ್ರಿಕ ಹಿನ್ನೆಲೆ, ಆಳ್ವಿಕೆ ನಡೆಸುತ್ತಿದ್ದ ಅರಸು ಮನೆತನಗಳು, ಪ್ರಭುತ್ವ ಹಾಗೂ ಗುತ್ತುಗಳ ನಡುವಿನ ಸಂಬಂಧವನ್ನು ಅರ್ಥೈಸಲು ಪ್ರಸ್ತುತ ಅಧ್ಯಯನವು ಸಹಾಯ ಮಾಡುತ್ತದೆ. ತುಳುನಾಡಿನ ಸಮಾಜದ ವೈಶಿಷ್ಟ್ಯಪೂರ್ಣ ಲಕ್ಷಣಗಳನ್ನು ತಿಳಿಯುವುದರೊಂದಿಗೆ ವಸಾಹತುಪೂರ್ವ ಕಾಲದಿಂದ ಇಂದಿನವರೆಗಿನ ತುಳುವ ಸಮಾಜದ ವರ್ಗಗಳು, ವಿವಿಧ ಸಮುದಾಯಗಳ ನಡುವಿನ ಸಂಬಂಧ, ಕೃಷಿ ಸಮಾಜ ಮತ್ತು ಅದರ ಸುತ್ತಮುತ್ತಲಿನ ಕೃಷಿ ಜಗತ್ತನ್ನು ಅರ್ಥೈಸಬಹುದು. ತುಳುನಾಡಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಗಳೊಂದಿಗೆ, ಮನೋರಂಜನಾ ಆಚರಣೆಗಳು, ಕ್ರೀಡೆಗಳನ್ನು ತಿಳಿಯಲು ಈ ಅಧ್ಯಯನವು ಸಹಾಯ ಮಾಡುತ್ತದೆ. ಹಲವು ಪಾಡ್ದನಗಳನ್ನು ಅಧ್ಯಯನದಲ್ಲಿ ಆಕರಗಳಾಗಿ ಬಳಸಿದ್ದರಿಂದ ಪಾಡ್ದನಗಳ ಕುರಿತು ಅರಿವನ್ನು ಮೂಡಿಸುದರೊಂದಿಗೆ, ಪಾಡ್ದನಗಳ ಮಹತ್ವವನ್ನು ಎಲ್ಲರಿಗೆ ತಿಳಿಸುವಲ್ಲಿ ಈ ಅಧ್ಯಯನವು ಉಪಯುಕ್ತವಾಗಿದೆ. ಗುತ್ತು ಕೇಂದ್ರಿತ ಸಂಸ್ಕೃತಿಯು ಇಂದಿನ ದಿನಗಳಲ್ಲಿ ನಶಿಸಿ ಹೋಗುತ್ತಿರುವ ಚಿತ್ರಣವನ್ನು ಈ ಅಧ್ಯಯನವು ತೆರೆದಿಡುವುದರಿಂದ, ಅದನ್ನು ಉಳಿಸುವ ಕಾಳಜಿಯನ್ನು ಯುವಜನರಲ್ಲಿ ಬೆಳೆಸಲು ಈ ಅಧ್ಯಯನವು ಸಹಕಾರಿಯಾಗಲಿದೆ. ಗುತ್ತುಮನೆಗಳು ಶ್ರೀಮಂತ ಪರಂಪರೆಯ ತಾಣಗಳಾಗಿದ್ದು ಅದನ್ನು ಮುಂದಿನ ಪೀಳಿಗೆಯವರಿಗೆ ಉಳಿಸಿಡಲು ಕ್ರಮಗಳನ್ನು ಕೈಗೊಳ್ಳುವುದು ಅತೀ ಅಗತ್ಯವಾಗಿದೆ ಎಂಬುದನ್ನು ಈ ಅಧ್ಯಯನದಿಂದ ತಿಳಿಯಬಹುದು.

1.7 ಸಂಶೋಧನಾ ವಿಧಾನ

'ತುಳುನಾಡಿನ ಗುತ್ತುಗಳು: ಇತಿಹಾಸ, ಸಂಸ್ಕೃತಿ ಮತ್ತು ಸ್ಥಿತ್ಯಂತರಗಳು' ಎಂಬ ಅಧ್ಯಯನವನ್ನು ಐತಿಹಾಸಿಕ ವಿಶ್ಲೇಷಣಾ ವಿಧಾನ, ಪರಾಮರ್ಶನ ವಿಧಾನ, ಸಂದರ್ಶನ ವಿಧಾನ ಹಾಗೂ ಅವಲೋಕನಾ ವಿಧಾನ ಮೂಲಕ ನಡೆಸಲಾಗಿದೆ.

ಐತಿಹಾಸಿಕ ವಿಶ್ಲೇಷಣಾ ವಿಧಾನ: ಗುತ್ತುಗಳ ಪ್ರಾಚೀನತೆ, ಗುತ್ತುಗಳ ಅಸ್ಮಿತೆಯೆಂದು ಗುರುತಿಸಲ್ಪಟ್ಟ ಅಳಿಯಸಂತಾನ ಪದ್ಧತಿ, ಮಾತೃವಂಶೀಯತೆ, ಗುತ್ತುಗಳು ನಡೆಸುವ ಕಂಬಳಗಳ ಹಿನ್ನೆಲೆಯನ್ನು ಅಧ್ಯಯನ ಮಾಡಲು ಶಾಸನಗಳನ್ನು, ಪಾಡ್ದನಗಳು, ಭೂ ಹಿಡುವಳಿ ಪತ್ರಗಳು, ಗೇಣಿ ಪತ್ರಗಳನ್ನು ಹಾಗೂ ಸರಕಾರ ವರದಿಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಪರಾಮರ್ಶನ ವಿಧಾನ: ಗುತ್ತು ಸಮಾಜವನ್ನು ವಿವಿಧ ಆಯಾಮಗಳಿಂದ ಅಧ್ಯಯನ ಮಾಡುವುದರಿಂದ ಕರಾವಳಿ ಕರ್ನಾಟಕದ ಅರಸು ಮನೆತನಗಳು, ಕರಾವಳಿಯ ಸಾಮಾಜಿಕ ವರ್ಗಗಳು, ದಕ್ಷಿಣ ಕನ್ನಡದ ಗುತ್ತು ಸಮಾಜದ ಪರಿಕಲ್ಪನೆ, ಹಿನ್ನೆಲೆ ಹಾಗೂ ಗುತ್ತು ಸಮಾಜದ ಸಂಪ್ರದಾಯಗಳನ್ನು ಅಧ್ಯಯನ ಮಾಡುವಲ್ಲಿ ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿದ ಕೃತಿಗಳನ್ನು, ದೇವಸ್ಥಾನ ಹಾಗೂ ದೈವಸ್ಥಾನದ ಸ್ಥಳಪುರಾಣಗಳು ಕೂಡ ಗುತ್ತುಮನೆಗಳ ಬಗ್ಗೆ ಮಾಹಿತಿಯನ್ನು ನೀಡುವುದರಿಂದ ಅವುಗಳನ್ನು ಪರಾಮರ್ಶನ ಮಾಡಿ ಅಧ್ಯಯನ ಮಾಡಲಾಗಿದೆ.

ಸಂದರ್ಶನ ವಿಧಾನ: ಗುತ್ತು ಸಮಾಜದ ವೈಶಿಷ್ಟ್ಯತೆ, ಗುತ್ತು ಸಮಾಜದೊಳಗಿನ ಸಂಪ್ರದಾಯಗಳು ಮತ್ತು ಆಚರಣೆಗಳ ಕುರಿತ ಮಾಹಿತಿ ಸಂಗ್ರಹಣೆಯನ್ನು ಗುತ್ತುಮನೆಗಳಿಗೆ ಬೇಟಿ ನೀಡಿ, ಗುತ್ತುಮನೆಗೆ ಸಂಬಂಧಿಸಿದ ಹಿರಿಯ ಅನುಭವಿಗಳನ್ನು ಸಂದರ್ಶನ ಮಾಡುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಅವಲೋಕನಾ ವಿಧಾನ: ಗುತ್ತುಮನೆಗಳ ವಾಸ್ತುಶಿಲ್ಪದ ವೈಶಿಷ್ಟ್ಯತೆ, ಗುತ್ತುಮನೆಗಳ ಪ್ರಸ್ತುತ ಸ್ಥಿತಿಗಳನ್ನು ಅರ್ಥೈಸಲು ಗುತ್ತುಮನೆಗಳಿಗೆ ಬೇಟಿ ನೀಡಿ ಅವಲೋಕನ ಮಾಡಲಾಗಿದೆ.

1.8 ಅಧ್ಯಯನ ವಿಭಜನೆ:

ಪ್ರಸ್ತುತ ಮಹಾ ಪ್ರಬಂಧವು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ 1: ಪೀಠಿಕೆ : ತುಳುನಾಡಿನ ಇತಿಹಾಸದಲ್ಲಿ ರಾಜಕೀಯ ಬೆಳವಣಿಗೆಗಳು, ಅಳುಪರು ಮತ್ತು ವಿಜಯನಗರ ಕಾಲದ ತುಳುನಾಡಿನ ಆಡಳಿತ ವ್ಯವಸ್ಥೆ, ಆಡಳಿತದಲ್ಲಿ ಗುತ್ತುಗಳ ಪಾತ್ರ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಾಹಿತ್ಯಿಕ ಅವಲೋಕನ, ಸಂಶೋಧನಾ ವಿಧಾನ, ಆಕರಗಳ ಚರ್ಚೆ.

ಅಧ್ಯಾಯ 2: ಗುತ್ತು- ಅರ್ಥ, ಮೂಲ, ತುಳುನಾಡಿನ ಪ್ರಭುತ್ವ: ಆಡಳಿತ ವ್ಯವಸ್ಥೆಯಲ್ಲಿ ಗುತ್ತುಗಳು

ಅಧ್ಯಾಯ 3 : ತುಳುನಾಡಿನ ಪ್ರಬಲ ಹಾಗೂ ಪ್ರಮುಖ ಸಾಮಾಜಿಕ ವರ್ಗಗಳು

ಅಧ್ಯಾಯ 4 : ತುಳುನಾಡಿನ ಗುತ್ತು ಸಮಾಜ- ಪರಿಕಲ್ಪನೆ ಮತ್ತು ಅಸ್ಮಿತೆ

ಅಧ್ಯಾಯ 5 : ಗುತ್ತು – ಸಮಾಜ: ಸಂಬಂಧಗಳು

ಅಧ್ಯಾಯ 6: ಗುತ್ತು ಕೇಂದ್ರಿತ ಸಾಮಾಜಿಕ ಹಾಗೂ ಆರಾಧನಾ ಸಂಪ್ರದಾಯಗಳು ಹಾಗೂ ಆಚರಣೆಗಳು, ಮನೋರಂಜನೆಗಳು

ಅಧ್ಯಾಯ 7: ಗುತ್ತುಗಳ ಸ್ಥಿತ್ಯಂತರ : ಕಾರಣವಾದ ಅಂಶಗಳು, ಗುತ್ತುಗಳ ಪ್ರಸ್ತುತ ಸ್ಥಿತಿಗತಿ

ಅಧ್ಯಾಯ 8 : ಉಪಸಂಹಾರ : ಸಂಶೋಧನೆಯಿಂದ ಹೊರಹೊಮ್ಮಿದ ತೀರ್ಮಾನಗಳು, ಛಾಯಾಚಿತ್ರಗಳು, ಅನುಬಂಧಗಳು, ಗ್ರಂಥಸೂಚಿ.

ಅಧ್ಯಾಯ ಒಂದರಲ್ಲಿ ತುಳುನಾಡಿನ ಇತಿಹಾಸದ ರಾಜಕೀಯ ಬೆಳವಣಿಗೆಗಳು, ಅಳುಪರು ಮತ್ತು ವಿಜಯನಗರ ಕಾಲದ ತುಳುನಾಡಿನ ಆಡಳಿತ ವ್ಯವಸ್ಥೆ, ಆಡಳಿತದಲ್ಲಿ ಗುತ್ತುಗಳ ಪಾತ್ರ, ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಮಹತ್ವ, ಸಂಶೋಧನಾ ವಿಧಾನ, ಆಕರಗಳ ಚರ್ಚೆ. ಸಾಹಿತ್ಯ ಅವಲೋಕನಗಳನ್ನು ನೀಡಲಾಗಿದೆ.

ಅಧ್ಯಾಯ ಎರಡರಲ್ಲಿ ಗುತ್ತು ಪದದ ಮೂಲ, ಅರ್ಥ, ತುಳುನಾಡಿನ ಅರಸು ಮನೆತನಗಳು ಮತ್ತು ಅವರ ಆಡಳಿತ ವಿಭಾಗಗಳು, ಗುತ್ತುಗಳ ಪ್ರಾಚೀನತೆ, ಗುತ್ತುಗಳ ಪ್ರಾಬಲ್ಯತೆ, ತುಳುನಾಡಿನ ಅರಸು ಮನೆತನಗಳು ಮತ್ತು ಮಾಗಣೆ ಬಲ್ಲಾಳರೊಂದಿಗೆ ಗುತ್ತಿನ ಸಂಬಂಧ, ಗುತ್ತಿನ ವಿಧಗಳು, ಗುತ್ತಿನ ಅಧಿಕಾರಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಮೂರರಲ್ಲಿ ತುಳುನಾಡಿನ ಪ್ರಭುತ್ವದಲ್ಲಿ ಪ್ರಬಲ ಹಾಗೂ ಪ್ರಮುಖ ಸಾಮಾಜಿಕ ವರ್ಗಗಳಾದ ಬ್ರಾಹ್ಮಣರು, ಜೈನರು, ಬಂಟರು ಮತ್ತು ಬಿಲ್ಲವರ ಪಾತ್ರಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ತುಳುನಾಡಿನ ಗುತ್ತು ಸಮಾಜದ ಅಸ್ಮಿತೆಯೆಂದು ಗುರುತಿಸಲ್ಪಡುವ 'ಗಡಿ ಪತ್ತುನಿ' ಗಡಿ ಹಿಡಿಯುವುದು– ಆಚರಣೆ, ಗುತ್ತಿನ ಚಾವಡಿ, ಮಾತೃವಂಶೀಯತೆ ಮತ್ತು ಅಳಿಯಕಟ್ಟು, ಗುತ್ತುವಿನಲ್ಲಿ ಮಹಿಳೆಯ ಸ್ಥಾನಮಾನ, 'ಬಳಿ/ಬರಿ' ಪದ್ಧತಿಯನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದರಲ್ಲಿ 'ಅಜಲು ವ್ಯವಸ್ಥೆ', ಅಜಲು ವ್ಯವಸ್ಥೆಯಲ್ಲಿ ಗುತ್ತುಗಳ ನಾಯಕತ್ವ, ಗುತ್ತು ಮತ್ತು ಗೇಣಿ ಒಕ್ಕಲುಗಳ ಸಂಬಂಧ, ಕೆಳವರ್ಗದವರೊಂದಿಗೆ ಗುತ್ತಿನ ಸಂಬಂಧ, ಮೂಲದಾಳು ಪದ್ಧತಿಯ ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ಗುತ್ತು ಕೇಂದ್ರಿತ ಸಾಮಾಜಿಕ ಆಚರಣೆಗಳಾದ ಕಂಬಳ, ಕೋಳಿಕುಂಟ, ದೈವಾರಾಧನೆ, ಹಾಗೂ ಆರಾಧನಾ ಆಚರಣೆಗಳಾದ ಚೆಂಡು, ವರಸರೆ, ತೂಟೆದಾರಗಳಲ್ಲಿ ಗುತ್ತಿನ ಪಾತ್ರ, ದೇವಾಲಯ, ದೈವಸ್ಥಾನ ಮತ್ತು ಗರಡಿಗಳಲ್ಲಿ ಗುತ್ತುಮನೆಗಳ ನೇತೃತ್ವ, ಮನೋರಂಜನಾತ್ಮಕ ಹವ್ಯಾಸಗಳಾದ ಬೇಟೆ, ಕೋಳಿಅಂಕಗಳಲ್ಲಿ ಗುತ್ತುಮನೆಗಳ ಪಾಲ್ಗೊಳ್ಳುವಿಕೆ, ಗುತ್ತು ಮನೆಗಳು ಯಕ್ಷಗಾನ, ತಾಳಮದ್ದಳೆ, ಪುರಾಣವಾಚನ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ನೀಡಿದ ಪೋಷಣೆಗಳನ್ನು ವಿಮರ್ಶಿಸಿಸಲಾಗಿದೆ.

ಅಧ್ಯಾಯ ಏಳರಲ್ಲಿ ಗುತ್ತುಗಳ ಸ್ಥಾನಮಾನದಲ್ಲಿ ಹಾಗೂ ಆಚರಣೆಗಳಲ್ಲಿ ಆದ ಸ್ಥಿತ್ಯಂತರ ಹಾಗೂ ಬದಲಾವಣೆಗೆ ಪೂರಕವಾದ ಅಂಶಗಳನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ಭೂಸುಧಾರಣಾ ಕಾನೂನುಗಳು, ಅಳಿಯಸಂತಾನ ಕಾಯಿದೆ, ಶಿಕ್ಷಣದ ವ್ಯಾಪಕತೆ, ಆಧುನೀಕರಣ, ಕೈಗಾರಿಕರಣ, ನಗರಗಳ ಬೆಳವಣಿಗೆ ಮತ್ತು ವಲಸೆ ಮುಂತಾದ ಅಂಶಗಳು ಗುತ್ತುಮನೆಗಳ ಇಂದಿನ ಸ್ಥಿತಿಗೆ ಹೇಗೆ ಕಾರಣವಾಗಿವೆ ಎಂದು ವಿಶ್ಲೇಷಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಸಂಶೋಧನೆಯಿಂದ ಹೊರಹೊಮ್ಮಿದ ತೀರ್ಮಾನಗಳನ್ನು ಚರ್ಚಿಸಲಾಗಿದೆ. ಮಹಾಪ್ರಬಂಧಕ್ಕೆ ಸಂಬಂಧಿಸಿದ ಚಿತ್ರಗಳು, ಅನುಬಂಧಗಳು, ಗ್ರಂಥಸೂಚಿಗಳನ್ನು ನೀಡಲಾಗಿದೆ.

1.9 ಸಾಹಿತ್ಯ ಅವಲೋಕನ

ಇತಿಹಾಸವು ನಿರಂತರವಾಗಿ ರಚನೆಯಾಗುವ ವಿಷಯವಾಗಿದ್ದು, ಇತಿಹಾಸವು ಬೇರೆ ಬೇರೆ ಅವಧಿಯಲ್ಲಿ ಪುನರ್‌ರಚನೆಯಾಗುತ್ತಿದ್ದು ಇತಿಹಾಸ ವ್ಯಾಪ್ತಿಯು ವಿಸ್ತಾರವಾಗುತ್ತಾ ಸಾಗುತ್ತದೆ.

ಇತಿಹಾಸಗಾರರು ಇತಿಹಾಸವನ್ನು ಅಧ್ಯಯನ ಮಾಡುವಾಗ ವಿವಿಧ ಸಿದ್ಧಾಂತಗಳ ಪ್ರಭಾವಕ್ಕೆ ಒಳಪಟ್ಟು ಇತಿಹಾಸವನ್ನು ವಿಶ್ಲೇಷಣೆ ಮಾಡಿದ್ದು, ವಿವಿಧ ಕಾಲಘಟ್ಟದಲ್ಲಿ ಇತಿಹಾಸಗಾರರ ಚಿಂತನೆಯಲ್ಲಿ ಬದಲಾವಣೆಯಿಂದಾಗಿ ಇತಿಹಾಸ ರಚನೆಯು ವೈವಿಧ್ಯತೆಗಳಿಂದ ಕೂಡಿದೆ. ಭಾರತದಲ್ಲಿ ಆಧುನಿಕ ಮಾದರಿಯ ಇತಿಹಾಸ ರಚನೆಯನ್ನು ಯುರೋಪಿಯನ್ನರು ಪ್ರಾರಂಭಿಸಿದರು. ಯುರೋಪಿಯನ್ ಬರಹಗಾರರು ವಿವಿಧ ದೃಷ್ಟಿಕೋನಗಳಲ್ಲಿ ಭಾರತದ ಇತಿಹಾಸವನ್ನು ನೋಡಲಾರಂಭಿಸಿದರು. ಪೌರ್ವಾತ್ಯವಾದಿ ಬರಹಗಾರರು ಭಾರತದ ಪ್ರಾಚೀನ ಗ್ರಂಥಗಳ ವೈಭವವನ್ನು ಯುರೋಪಿಗೆ ಪರಿಚಯಿಸಿದರು. ಸಾಮ್ರಾಜ್ಯಶಾಹಿ ಬರಹಗಾರರು ಬ್ರಿಟಿಷ್ ಆಳ್ವಿಕೆಯನ್ನು ಸಮರ್ಥಿಸುವಂತೆ ಸಾಮ್ರಾಜ್ಯಶಾಹಿ ಧೋರಣೆಯುಳ್ಳ ಇತಿಹಾಸವನ್ನು ರಚಿಸಿದರು. ಸಾಮ್ರಾಜ್ಯಶಾಹಿ ಬರಹಗಳಿಗೆ ಉತ್ತರವನ್ನು ನೀಡಲು ರಾಷ್ಟ್ರೀಯ ಬರಹಗಾರರು ಹುಟ್ಟಿಕೊಂಡು ಭಾರತದ ಚರಿತ್ರೆಯನ್ನು ವೈಭವೀಕರಿಸುವ ಕೆಲಸವನ್ನು ಇವರು ಮಾಡಿದರು. ಭಾರತದ ಹಿರಿಮೆ, ಶ್ರೀಮಂತಿಕೆಯನ್ನು ಎತ್ತಿ ತೋರಿಸುವುದರ ಮೂಲಕ ದೇಶಾಭಿಮಾನವನ್ನು ಮೆರೆದರು. ಆದರೆ ಸಾಮ್ರಾಜ್ಯಶಾಹಿ ಹಾಗೂ ರಾಷ್ಟ್ರೀಯವಾದಿ ಬರಹಗಾರರು ಹುಟ್ಟುಹಾಕಿದ ಇತಿಹಾಸದ ಮಾದರಿಗಳು ಒಂದೇ ರೀತಿಯ ಇತಿಹಾಸದ ರಚನೆಗೆ ಕಾರಣವಾದವು. ಇತಿಹಾಸ ರಚನೆಯ ಏಕಾತಾನತೆಯನ್ನು ಬದಲಾಯಿಸಿ, ವಿಭಿನ್ನ ದೃಷ್ಟಿಕೋನದಿಂದ ಇತಿಹಾಸವನ್ನು ನೋಡಲಾರಂಭಿಸಿದವರೆಂದರೆ ಮಾರ್ಕ್ಸ್‌ವಾದಿಗಳು, ಅವರು ಸಮಾಜ ಹಾಗೂ ಜನರ ನೆಲೆಯಲ್ಲಿ ಇತಿಹಾಸವನ್ನು ಅಧ್ಯಯನ ಮಾಡಲಾರಂಭಿಸಿದರು. ನಂತರ ಪ್ರಚಲಿತಗೊಂಡ ಚಿಂತನೆಯೆಂದರೆ ಸಬಾಲ್ಟನ್ ಚಿಂತನೆ, ಇದು ಇತಿಹಾಸವನ್ನು ಜನರ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾರಂಭಿಸಿತು. ಸಬಾಲ್ಟನ್ ಚಿಂತನೆಕಾರರು ಅಧಿಕಾರದ ನೆಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅಧ್ಯಯನ ಮಾಡಲಾರಂಭಿದರು. ನಂತರ ಬಂದಂತಹ ನವಚಾರಿತ್ರಿಕ ಹಾಗೂ ಆದುನಿಕೋತ್ತರ ಚಿಂತನೆಗಳಿಂದಾಗಿ ಇತಿಹಾಸವು ಮರುವಿಮರ್ಶೆಗೆ ಒಳಗಾಗುತ್ತಿದೆ. ಇತಿಹಾಸಗಾರರು ಇತಿಹಾಸವನ್ನು ರಾಜಕೀಯ ಚರಿತ್ರೆ, ಆರ್ಥಿಕ ಚರಿತ್ರೆ, ಸಾಂಸ್ಕೃತಿಕ ಚರಿತ್ರೆ, ಜನರ ಚರಿತ್ರೆ ಮುಂತಾದ ನೆಲೆಗಳಲ್ಲಿ ಅಧ್ಯಯನ ಮಾಡುತ್ತಾ ಬಂದಿದ್ದಾರೆ. ಮೇಲ್ವರ್ಗ, ಕೆಳವರ್ಗ, ಕೆಳಸಮುದಾಯ ಮುಂತಾದ ನೆಲೆಯಲ್ಲಿ ಇತಿಹಾಸವು ರಚನೆಯಾಗಲಾರಂಬಿಸಿತು. ಕೆಲವೊಂದು ವ್ಯವಸ್ಥೆಯನ್ನು ಪ್ರಶ್ನಿಸುವ ಅಥವಾ ಸಮರ್ಥಿಸುವ ಕೆಲಸವನ್ನೂ ಇತಿಹಾಸಗಾರರು ಮಾಡುತ್ತಾರೆ.

ತುಳುನಾಡಿನ ಇತಿಹಾಸ ರಚನೆಯ ಬೆಳವಣಿಗೆಯನ್ನು ಗಮನಿಸಿದಾಗ ಯುರೋಪಿಯನ್ ಪರಿಕಲ್ಪನೆಯ ಇತಿಹಾಸ ರಚನೆಯ ಸಂಪ್ರದಾಯವು ಇಲ್ಲಿ ಕಂಡು ಬರದಿದ್ದರೂ, ತಮ್ಮದೇ ರೀತಿಯಲ್ಲಿ ಇಲ್ಲಿನ ಇತಿಹಾಸವನ್ನು ಅರಿಯುವ ಪ್ರಯತ್ನಗಳಾಗಿವೆ. ಇಲ್ಲಿಗೆ ಬಂದಂತಹ ಕ್ರೈಸ್ತ ಮಿಶನರಿಗಳು, ಪಾಶ್ಚಿಮಾತ್ಯ ವ್ಯಾಪಾರಿಗಳು, ವಸಾಹತು ಆಳ್ವಿಕೆಯಲ್ಲಿದ್ದಂತಹ ಬ್ರಿಟಿಷ್ ಅಧಿಕಾರಿಗಳು ತುಳುನಾಡಿನ ಭಾಷೆ, ಸಂಸ್ಕೃತಿ, ಇತಿಹಾಸ ಇತ್ಯಾದಿ ವಿಷಯದ ಕುರಿತಾಗಿ ಬರೆದಿದ್ದಾರೆ. ತುಳುನಾಡಿನ ಭಾಷೆ, ಸಂಸ್ಕೃತಿ, ಇತಿಹಾಸ ಇತ್ಯಾದಿ ವಿಷಯದ ಕುರಿತಾಗಿ ಮೊದಲ ಬಾರಿಗೆ ಆಸಕ್ತಿ ವಹಿಸಿದವರೆಂದರೆ ಇಲ್ಲಿಗೆ ಬಂದಂತಹ ಬಾಸೆಲ್ ಮಿಶನ್‌ನವರು, ಇವರು ತಮ್ಮನ್ನು ತುಳುಭಾಷೆಯ ಅಧ್ಯಯನದಲ್ಲಿ ತೊಡಗಿಸಿಕೊಂಡರು. ಎ.ಸಿ. ಬರ್ನೆಲ್ ಹಾಗೂ ಮ್ಯಾನರ್ ಇತರರೊಂದಿಗೆ ಸೇರಿಕೊಂಡು ಕೆಲವು ಪಾಡ್ದನಗಳನ್ನು ಸಂಗ್ರಹಿಸಿ ಆಂಗ್ಲ ಭಾಷೆಗೆ ಭಾಷಾಂತರಿಸಿದರು. ರೆವರೆಂಡ್ ಮೊಗ್ಲಿಂಗ್ ತುಳುವರ ಭೂತಾರಾಧನೆ ಕುರಿತು ಬರೆದಿದ್ದಾರೆ. ಪೀಟರ್ ಮಂಡಿ, ಫ್ರಾಯರ್, ತೇವ್ನೋಟ್‌ರವರ ವರದಿಗಳಲ್ಲಿ ಕರಾವಳಿ ಕರ್ನಾಟಕ ಆರ್ಥಿಕ ಮತ್ತು ಧಾರ್ಮಿಕ ವಿಚಾರಗಳ ಕುರಿತು ತಿಳಿಯಬಹುದಾಗಿದೆ. ಫ್ರಾಯರ್ ಮತ್ತು ಜೋಸ್‌ವಾಸ್ ವರದಿಗಳು ಇಲ್ಲಿನ ಕ್ರೈಸ್ತ ಧರ್ಮದ ಚಟುವಟಿಕೆಗಳ ಬಗ್ಗೆ ದಾಖಲೆಗಳನ್ನು ನೀಡುತ್ತವೆ. ಹೆಮಿಲ್ಟನ್, ಫೋರ್ಬಸ್, ಪಾರಸನ್ ವರದಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಳದಿ ನಾಯಕ, ಹೈದರ್ ಹಾಗೂ ಟಿಪ್ಪು ಸುಲ್ತಾನರ ಆಳ್ವಿಕೆಯಲ್ಲಿ ನಡೆದ ಆರ್ಥಿಕ ಚಟುವಟಿಕೆಗಳ ಕುರಿತು ಮಾಹಿತಿಯನ್ನು ನೀಡುತ್ತವೆ. ಮೆಕೆನ್ಜೀ ಹಾಗೂ ಫ್ರಾನ್ಸಿಸ್ ಬುಕಾನನ್‌ರು ದಕ್ಷಿಣ ಕನ್ನಡ ಜಿಲ್ಲೆಯ 18ನೇ ಶತಮಾನದವರೆಗಿನ ಇತಿಹಾಸವನ್ನು ರಚಿಸುವ ಪ್ರಯತ್ನ ಮಾಡಿದ್ದಾರೆ. ಮೆಕೆನ್ಜೀಯು ಇತಿಹಾಸಕ್ಕೆ ಸಂಬಂಧಿಸಿದ ಸಾಮಾಗ್ರಿಗಳನ್ನು ಸಂಗ್ರಹಿಸಿದ್ದು ಮಾತ್ರ, ಆದರೆ ಅದನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಿಲ್ಲ. ಫ್ರಾನ್ಸಿಸ್ ಬುಕಾನನ್ ವರದಿಗಳು 'ಎ ಜರ್ನಿ ಫ್ರಮ್ ಮದ್ರಾಸ್ ತ್ರೂ ದ ಕಂಟ್ರೀಸ್ ಆಫ್ ಮೈಸೂರು, ಕೆನರಾ ಎಂಡ್ ಮಲಬಾರ್' ಎಂಬ ಶೀರ್ಷಿಕೆಯಲ್ಲಿ ಮೂರು ಸಂಪುಟಗಳಲ್ಲಿ ಪ್ರಕಟಗೊಂಡವು. ಮದ್ರಾಸ್ ಪ್ರೆಸಿಡೆನ್ಸಿಯು ಡಿಸ್ಟ್ರಿಕ್ಟ್ ಮ್ಯಾನ್ಯುಲ್‌ಗಳನ್ನು ರಚಿಸಿತು. ಜೆ, ಸ್ಟರಕ್ ಹಾಗೂ ಎಚ್. ಎ. ಎಲ್ ಸ್ಟಾರ್ಟ್ ಸೌತ್ ಕೆನರಾ ಕುರಿತಾಗಿ ಮ್ಯಾನ್ಯುಲ್‌ಗಳನ್ನು ರಚಿಸಿದರು. ಇವುಗಳು ತುಳುನಾಡಿನ ಇತಿಹಾಸ, ಕಂದಾಯ ವ್ಯವಸ್ಥೆ, ಭೂ ಒಡೆತನ, ಭೌಗೋಳಿಕ ಅಂಶಗಳು ಮುಂತಾದ ವಿಷಯಗಳ ಕುರಿತಾಗಿ ಬೆಳಕು ಚೆಲ್ಲುತ್ತವೆ. ಬೆಂಜಮಿನ್ ಲೂಯಿಸ್ ರೈಸ್ ಹಾಗೂ ಜಾನ್ ಫೈತ್‌ಫುಲ್ ಫ್ಲೀಟ್‌ರವರು ಕರ್ನಾಟಕದ ಇತರ ಭಾಗಗಳ ಶಾಸನಗಳ ಅಧ್ಯಯನ ಮಾಡುವಾಗ ತುಳುರಾಜ್ಯದ ಶಾಸನಗಳನ್ನು ಅಧ್ಯಯನ ಮಾಡಿ ಪ್ರಕಟಿಸಿರುತ್ತಾರೆ. ಈ

ಎಲ್ಲಾ ಪ್ರಯತ್ನಗಳ ಫಲವಾಗಿ ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿದಂತೆ ವೈವಿಧ್ಯಮಯವಾದ ಆಕರಗಳು ಸಿಗುವಂತಾಯಿತು.

ಮಂಜೇಶ್ವರ ಗಣಪತಿ ರಾವ್ ಐಗಳ್‌ರವರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' (1923): ತುಳುನಾಡಿನ ಇತಿಹಾಸ ರಚನೆಗೆ ಹೊಸದಾದ ಆಯಾಮವನ್ನು ನೀಡಿದವರೆಂದರೆ ಮಂಜೇಶ್ವರ ಗಣಪತಿ ರಾವ್ ಐಗಳ್. ಅವರ ಕೃತಿ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ'ವು ವಿವಿಧ ಲಭ್ಯವಿರುವ ಆಕರಗಳನ್ನು ಬಳಸಿಕೊಂಡು ಇತಿಹಾಸವನ್ನು ಕ್ರಮಬದ್ಧವಾಗಿ ರಚನೆ ಮಾಡುವ ಪ್ರಯತ್ನವಾಗಿದೆ. ಈ ಕೃತಿಯಲ್ಲಿ ಐಗಳ್‌ರವರು ಭೂತಾಳ ಪಾಂಡ್ಯನ ಕುರಿತಾದ ಸಮಗ್ರ ಮಾಹಿತಿ, ಕರಾವಳಿ ಕರ್ನಾಟಕದ ಬಂಟರ ಹಾಗೂ ನಾಡವರ ಬಗ್ಗೆ ಬರೆಯುತ್ತಾರೆ. ತುಳುನಾಡಿನ ಪ್ರಭಾವಶಾಲಿಯಾದ ರಾಜ ಮನೆತನಗಳಲ್ಲಿ ಕಳಸ - ಕಾರ್ಕಳದ ಭೈರರಸ ಒಡೆಯರು ಕಾರ್ಕಳ ಹಾಗೂ ಚಿಕ್ಕಮಗಳೂರಿನ ಕಳಸ ಪ್ರದೇಶಗಳನ್ನು, ಗೇರುಸೊಪ್ಪೆ ಹಾಗೂ ಹಾಡುವಳ್ಳಿಯಲ್ಲಿ ಸಾಳುವರು ದಕ್ಷಿಣ ಕನ್ನಡದ ಸ್ವಲ್ಪ ಭಾಗಗಳು, ಉತ್ತರಕನ್ನಡದ ಹಲವು ಭಾಗಗಳು ಹಾಗೂ ಶಿವಮೊಗ್ಗದ ಕೆಲವು ಭಾಗಗಳ ಮೇಲೆ ಹಿಡಿತಗಳನ್ನು ಹೊಂದಿದ್ದವು. ಹಾಗೆಯೇ ದಕ್ಷಿಣ ಕನ್ನಡದ ಬೇರೆ ಬೇರೆ ಭಾಗಗಳನ್ನು ಕೇಂದ್ರವಾಗಿಟ್ಟುಕೊಂಡು ಹಲವು ರಾಜ ಮನೆತನಗಳಲ್ಲಿದ್ದವು. ಅವುಗಳೆಂದರೆ ಉಡುಪಿಯ ಸೂರಾಲಿನ ತೋಳಹರು, ಹೊಸಂಗಡಿಯ ಹೊನ್ನೆಯ ಕಂಬಳಿಯರಸರು, ಕುಂಬಳೆಯ ಅರಸರು, ಪುತ್ತಿಗೆ-ಮೂಡಬಿದರೆಯ ಚೌಟ ಅರಸರು, ಬಂಗಾಡಿಯ ಬಂಗರು, ಮೂಲಿಕೆಯ ಸಾವಂತರಸರು, ವೇಣೂರಿನ ಅಜಿಲರಸರು, ವಿಟ್ಲದ ಡೊಂಬಹೆಗ್ಗಡೆ ಅರಸರು ಇತ್ಯಾದಿ. ಇವುಗಳಲ್ಲಿ ಹೆಚ್ಚಿನ ಅರಸು ಮನೆತನಗಳು ಜೈನ ಮತಾವಲಂಭಿಗಳಾಗಿದ್ದರು ಎಂಬ ಮಾಹಿತಿಗಳು ಈ ಕೃತಿಯಿಂದ ಸಿಗುತ್ತವೆ. ಹಾಗೆಯೇ ಅವರು ದಕ್ಷಿಣ ಕನ್ನಡದಲ್ಲಿ ಆಳಿರುವ ಬಲ್ಲಾಳರು ಹಾಗೂ ಹೆಗ್ಗಡೆಯರನ್ನು ಪ್ರತಿ ಸೀಮೆಯಲ್ಲಿ ಗುರುತಿಸುತ್ತಾ ಆ ಸೀಮೆಗಳಡಿಯಲ್ಲಿ ಬರುವ ಗುತ್ತುಗಳನ್ನು ಗುರುತಿಸುತ್ತಾರೆ. ಬೇರೆ ಬೇರೆ ಗ್ರಾಮಗಳಲ್ಲಿ ಈ ಗುತ್ತುಗಳಿಗೆ ಇರುವ ಅಧಿಕಾರಗಳ ಬಗ್ಗೆ ಬರೆಯುತ್ತಾರೆ. ಕ್ರಿ.ಶ 1410ರ ಕರಿಯಂಗಳ ಗ್ರಾಮದ ಪಲ್ಲಿಪಾಡಿಯಲ್ಲಿ ಸಿಕ್ಕಿರುವ ಎರಡು ಶಾಸನಗಳಲ್ಲಿ ಅಮ್ಮನೂರು (ಅಮುಣಜೆ) ಗುತ್ತು, ಅರ್ಕುಳ ನಾನೂರಾಳ ಗುತ್ತು, ಚೆನ್ನದ(ಇನ್ನ)ಗುತ್ತು ಮತ್ತು ತೋಕೂರು ಗುತ್ತುಗಳ ಉಲ್ಲೇಖ ಬರುತ್ತದೆ. ಈ ಗುತ್ತು ಮನೆಗಳ ಮುಖ್ಯಸ್ಥರು ಸೇನಾಧಿಪತಿಗಳಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದ ಬಗ್ಗೆ ಈ ಶಾಸನಗಳು ಬೆಳಕು ಚೆಲ್ಲುತ್ತವೆ.

ಪೊಳಲಿ ಶೀನಪ್ಪ ಹೆಗ್ಗಡೆಯವರ ‘ಸಮಗ್ರ ಸಾಹಿತ್ಯ’ (1991) - ಈ ಕೃತಿಯು ಪೊಳಲಿ ಶೀನಪ್ಪ ಹೆಗ್ಗಡೆಯವರು ರಚಿಸಿರುವ ನಾಲ್ಕು ಕೃತಿಗಳನ್ನು ಒಳಗೊಂಡಿದೆ. ಅವುಗಳೆಂದರೆ - ‘ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯಕಟ್ಟು’ ‘ಪ್ರಾಚೀನ ತುಳುನಾಡು’, ‘ಪುಳಿನಾಪುರ ಮಹಾತ್ಮೆ’, ‘ಅಕ್ಕರಸು ಪೂಂಜೆದಿ ಕತೆ’. ಅವರು 1919ರಲ್ಲಿ ಇವರು ‘ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯಕಟ್ಟು’ ಎಂಬ ಕೃತಿಯನ್ನು ಪ್ರಕಟಿಸಿದರು. ಈ ಕೃತಿಯನ್ನು ಸಂಪೂರ್ಣವಾಗಿ ಐತಿಹಾಸಿಕ ಕೃತಿ ಎಂದು ಹೇಳಲಾಗದಿದ್ದರೂ, ಅವರ ಇತಿಹಾಸ ರಚನೆ ಮಾಡುವ ಪ್ರಯತ್ನವನ್ನು ಮೆಚ್ಚಲೇ ಬೇಕು. ಈ ಕೃತಿಯಲ್ಲಿ ಭೂತಾಳ ಪಾಂಡ್ಯನ ಅಳಿಯಕಟ್ಟು, ಅದರ ಹಿಂದಿರುವ ಕಥೆ ಹಾಗೂ ಭೂತಾಳ ಪಾಂಡ್ಯರಾಯನ ಹದಿನಾಲ್ಕು ಕಟ್ಟುಗಳು, ಹದಿನಾರು ಕಟ್ಟಳೆಗಳ ವಿವರಗಳನ್ನು ನೀಡಿದ್ದಾರೆ. ಭೂತಾಳ ಪಾಂಡ್ಯನು ನೇಮಿಸಿದ ಹೊಸ ಅರವತ್ತು ಬಳಿಗಳ ವಿವರಗಳು, ಮಾಗಣೆ, ಸೀಮೆ ಮೊದಲಾದ ವಿವರಗಳನ್ನು ನೀಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿಕ್ಕಿರುವ ಕೆಲವು ಶಾಸನಗಳ ನಕಲುಗಳನ್ನು ಹಾಗೂ ಅವುಗಳ ಕುರಿತಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಪೊಳಲಿ ಶೀನಪ್ಪ ಹೆಗ್ಗಡೆಯವರು ಎನ್. ಎಸ್ ಕಿಲ್ಲೆಯವರೊಂದಿಗೆ ಸೇರಿ ತುಳುನಾಡಿನ ಇತಿಹಾಸವನ್ನು ರಚನೆ ಮಾಡುವ ಪ್ರಯತ್ನದ ಫಲವೇ ಅವರ ಇನ್ನೊಂದು ಕೃತಿ ‘ಪ್ರಾಚೀನ ತುಳುನಾಡು’. ಅವರ ಇತರ ಕೃತಿಗಳಾದ ‘ಪುಳಿನಾಪುರ ಮಹಾತ್ಮೆ’, ‘ಅಕ್ಕರಸು ಪೂಂಜೆದಿ ಕತೆ’ ಕೃತಿಗಳು ತುಳುನಾಡಿನ ಸಮಾಜವನ್ನು ಅರ್ಥಮಾಡಿಕೊಳ್ಳಲು ಬಹಳ ಸಹಾಯ ಮಾಡುತ್ತವೆ.

‘ಏನ್ಸಿಯೆಂಟ್ ಕರ್ನಾಟಕ ಸಂಪುಟ.1 ಹಿಸ್ಟರಿ ಆಫ್ ತುಳುವ’- ಭಾಸ್ಕರ ಆನಂದ ಸಾಲೆತ್ತೂರು (1936) : ತುಳುನಾಡಿನ ಮೊದಲ ವೃತ್ತಿಪರ ಇತಿಹಾಸಕಾರರಾದ ಭಾಸ್ಕರ ಆನಂದ ಸಾಲೆತ್ತೂರುರವರು 1936ರಲ್ಲಿ ‘ಹಿಸ್ಟರಿ ಆಫ್ ತುಳುವ’ ಎಂಬ ಕೃತಿಯನ್ನು ಪ್ರಕಟಿಸಿದರು. ಈ ಕೃತಿಯು ತುಳುನಾಡಿನ ಇತಿಹಾಸಕಾರರಿಗೆ ಉತ್ತಮ ಮಾದರಿಯನ್ನು ನೀಡಿತು. ಅಳುಪರ ಇತಿಹಾಸ, ಕರ್ನಾಟಕದ ಇತರ ವಂಶಗಳೊಂದಿಗೆ ಅಳುಪರ ಸಂಬಂಧ, ಅಳುಪ ರಾಜರು, ಅವರ ಆಡಳಿತ, ತುಳುನಾಡಿನ ಜನಜೀವನವನ್ನು ತಮ್ಮ ಗ್ರಂಥದಲ್ಲಿ ಅವರು ಚಿತ್ರಿಸಿದ್ದಾರೆ. ತುಳುನಾಡಿನ ಗ್ರಾಮಾಡಳಿತ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದ ಕುರಿತು ಮಾಹಿತಿಗಳನ್ನು ನೀಡಿದ್ದಾರೆ. ಸಾಲೆತ್ತೂರರು ಬೂಡು ಅಥವಾ ಪೂರ್ವ ಪರಂಪರೆಯ ಮನೆಯು ತುಳುವರ ಸಾಂಸ್ಕೃತಿಕ ಪರಂಪರೆಯನ್ನು ಕಾಪಿಡುವ ಘಟಕ ಎಂದು ಹೇಳುತ್ತಾರೆ ಎಂದು ಅಭಿಪ್ರಾಯ ಪಡುತ್ತಾರೆ.

ತುಳುನಾಡಿನ ಇತಿಹಾಸ ರಚನಕಾರರಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಹೆಸರೆಂದರೆ ಪಿ. ಗುರುರಾಜ ಭಟ್ಟರದ್ದು. ಇವರು ತುಳುನಾಡಿನ ಇತಿಹಾಸ, ಶಾಸನಗಳು, ವಾಸ್ತುಶಿಲ್ಪದ ಕುರಿತು ವ್ಯಾಪಕವಾದ ಅಧ್ಯಯನವನ್ನು ನಡೆಸಿದ್ದಾರೆ.

'ತುಳುನಾಡು' : ಪಿ. ಗುರುರಾಜ ಭಟ್ಟ (1963): ಈ ಕೃತಿಯು ತುಳುನಾಡಿನ ಸಾಮಾಜಿಕ ಇತಿಹಾಸಕ್ಕೆ ಕೊಡುಗೆಯನ್ನು ನೀಡಿದೆ. ತುಳುವರು ಯಾರು? ತುಳುವ, ತುಳುನಾಡು ಪದದ ಹುಟ್ಟಿನ ಕುರಿತಾಗಿ ಚರ್ಚಿಸಿದ್ದಾರೆ. ತುಳುನಾಡಿನ ನಾಡವರ ಮೂಲ, ತುಳುನಾಡಿನಲ್ಲಿ ಜೈನ ಧರ್ಮವು ಬೆಳೆದ ರೀತಿಯ ಕುರಿತು ಈ ಕೃತಿಯು ಬೆಳಕು ಚೆಲ್ಲುತ್ತದೆ. ಗುರುರಾಜ ಭಟ್‌ರವರು ನಾಡವರು(ಬಂಟರು) ಮೊದಲಲ್ಲಿ ನಾಡನ್ನು ನಿರ್ಮಿಸಿ ಅದನ್ನು ಆಳುತ್ತಿದ್ದು, ಅನಂತರದಲ್ಲಿ ಭೂಮಿಯ ಒಡೆಯರಾಗಿ ಒಕ್ಕಲುತನವನ್ನು ಸ್ವೀಕರಿಸಿದರು. ಅವರಿಗೂ ಹಾಗೂ ಭೂಮಿಗೂ(ವ್ಯವಸಾಯಕ್ಕೂ) ಹಿಂದಿನಿಂದ ಇದ್ದ ನಿಕಟ ಸಂಬಂಧವಿದ್ದು ತುಳುನಾಡಿನಲ್ಲಿ ನಾಡವರನ್ನು ಒಕ್ಕಲ್ಮೈ ಎಂದು ಸಂಭೋಧಿಸುವುದರ ಔಚಿತ್ಯವನ್ನು ಇದರಿಂದ ತಿಳಿಯಬಹುದು. ಒಕ್ಕೆಲ್ಮೆ ಎಂದು ಈ ಸಮುದಾಯಕ್ಕೆ ಹೆಸರು ಬರಲು ಕಾರಣವೇನೆಂದರೆ ಈ ಸಮುದಾಯವು ತುಳುನಾಡಿನಲ್ಲಿ ಕೃಷಿಯ ಮೇಲೆ ಒಡೆತನವನ್ನು ಸಾಧಿಸಿತ್ತು. 'ಒಕ್ಕು' ಎಂದರೆ ಧಾನ್ಯವನ್ನು ಗಿಡದಿಂದ ಬೇರ್ಪಡಿಸುವುದು. ಹಾಗೆ ಮಾಡುವವನೇ ಒಕ್ಕಲು, ಬೇಸಾಯಗಾರ, ಒಕ್ಕಲ್ಮೈ ಒಕ್ಕಲಿಗ. ತುಳುವಿನಲ್ಲಿರುವ 'ಒಕ್ಕು' ಎಂಬ ಶಬ್ದವು ಪ್ರಥಮದಲ್ಲಿ ಇದೇ ಅರ್ಥದಲ್ಲಿಯೇ ಉಪಯೋಗಿಸಲ್ಪಟ್ಟು ಅನಂತರದಲ್ಲಿ ಭೂಮಿಯನ್ನು ಅಗೆಯುವುದು ಅಥವಾ ಕೃಷಿ ಮಾಡುವುದು ಎಂಬ ಅರ್ಥವನ್ನು ಪಡೆಯಿತು ಒಕ್ಕೆಲ್ಮೆ ಎಂಬ ಪದವು ಕೃಷಿಯ ಒಡೆತನ ಹೊಂದಿದವರು ಎಂಬ ಅರ್ಥವನ್ನು ಸೂಚಿಸುತ್ತದೆ ಎಂದು ಡಾ. ಪಾದೂರ್ ಗುರುರಾಜ ಭಟ್‌ರವರು ಅಭಿಪ್ರಾಯ ಪಡುತ್ತಾರೆ.

'ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್': ಪಿ. ಗುರುರಾಜ ಭಟ್ಟ (1975): ಅವರ ಪ್ರಮುಖ ಕೃತಿಯೆಂದರೆ 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್'. ತುಳುನಾಡಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಅಧ್ಯಯನದಲ್ಲಿ ತೊಡಗುವವರಿಗೆ ಇದು ಪ್ರಮುಖ ಪರಾಮರ್ಶನ ಗ್ರಂಥವಾಗಿದೆ. ಈ ಕೃತಿಯು ತುಳು ಪದದ ಮೂಲ, ಪ್ರಾಚೀನ ತುಳುನಾಡಿನ ಭೌಗೋಳಿಕ ವಿಸ್ತಾರ, ರಾಜಕೀಯ ಇತಿಹಾಸ, ಸಾಮಂತ ಅರಸು ಮನೆತನಗಳು, ಆಡಳಿತ, ಆರ್ಥಿಕ ಜೀವನ, ಸಮಾಜ, ಧರ್ಮ, ವಾಸ್ತುಶಿಲ್ಪ, ಮೂರ್ತಿಶಿಲ್ಪ ಇತ್ಯಾದಿ ವಿಷಯಗಳನ್ನು ಒಳಗೊಂಡಿವೆ. ಪಿ. ಗುರುರಾಜ ಭಟ್‌ರವರು ತಮ್ಮ 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್' ಎಂಬ ಕೃತಿಯಲ್ಲಿ ಗುತ್ತುಗಳು ಕೆಳ ಹಂತದ ಆಡಳಿತ ಘಟಕವಾಗಿದ್ದು ಅವುಗಳು ತುಳುನಾಡಿನ

ಆಡಳಿತದ ವೈಶಿಷ್ಟ್ಯವಾಗಿತ್ತು, ಹಾಗೂ ಗುತ್ತುಗಳು ಸೀಮೆಗಳ ಆಡಳಿತದಲ್ಲಿ ವಹಿಸುತ್ತಿದ್ದ ಪಾತ್ರಗಳ ಬಗ್ಗೆ ಬರೆಯುತ್ತಾರೆ. ಪಿ. ಗುರುರಾಜ ಭಟ್ಟರು 'A guttu may be defined as a manor-house with certain properties surrounding it and certain privileges enjoyed by it' ಅಂದರೆ ಗುತ್ತು ಎಂದರೆ ನಿರ್ದಿಷ್ಟ ಅಧಿಕಾರಗಳನ್ನು ಅನುಭೋಗಿಸುವ, ಜಮೀನಿಂದಾವೃತವಾಗಿರುವ ಜಮೀನ್ದಾರಿ ಮನೆಯಾಗಿದೆ. ಅದರ ಮುಖ್ಯಸ್ಥನನ್ನು ಗುತ್ತೆದಾರನೆಂದು ಕರೆಯಲಾಗುತ್ತದೆ. ಇವನು ತನ್ನ ಅಧಿಕಾರವನ್ನು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುತ್ತಾನೆ. ತನ್ನ ಒಡೆತನದಲ್ಲಿದ್ದ ಭೂಮಿಗೆ ಕೃಷಿ ಒಪ್ಪಂದದ ಪ್ರಕಾರ ನಿರ್ದಿಷ್ಟ ಪಡಿಸಿದ ಭೂಕಂದಾಯದ ಮೊತ್ತವನ್ನು ರಾಜ್ಯದ ಬೊಕ್ಕಸಕ್ಕೆ ಸಲ್ಲಿಸುವುದು ಅವನ ಜವಾಬ್ದಾರಿಯಾಗಿತ್ತು. ಹಾಗೆಯೇ ಅವನು ತನ್ನ ಒಡೆಯನಿಗೆ ಯುದ್ಧ ಸಂದರ್ಭದಲ್ಲಿ ನಿರ್ದಿಷ್ಟ ಪಡಿಸಿದ ಸೈನ್ಯವನ್ನು ಪೂರೈಸಬೇಕಿತ್ತು. ಈ ರೀತಿಯಾದ ವ್ಯವಸ್ಥೆಯು ಗುತ್ತಿನ ಮುಖ್ಯಸ್ಥನನ್ನು ಸೇನಾಧಿಪತಿ ಎಂದು ಗುರುತಿಸುವಂತೆ ಮಾಡಿತು. ನಾಡನ್ನು ಯಾವೂದಾದರೂ ಆಪತ್ತಿನ ಸಂದರ್ಭದಲ್ಲಿ ರಕ್ಷಣೆ ಮಾಡುವುದು ಗುತ್ತೇದಾರನ ಕರ್ತವ್ಯವಾಗಿತ್ತು ಎಂದು ಬರೆಯುತ್ತಾರೆ.

ಹೇರಂಜೆ ಕೃಷ್ಣ ಭಟ್ಟರ ಸಂಪಾದಕತ್ವದಲ್ಲಿ ಪ್ರಕಟಗೊಂಡ ಕೃತಿ 'ತುಳು ಕರ್ನಾಟಕ ಅರಸು ಮನೆತನಗಳು'(2000): ಈ ಕೃತಿಯಲ್ಲಿ ತುಳುನಾಡನ್ನು ಆಳಿದ ವಿವಿಧ ರಾಜಮನೆತನಗಳಾದ ಉಡುಪಿಯ ಸೂರಾಲಿನ ತೋಳಹರು, ಹೊಸಂಗಡಿಯ ಹೊನ್ನೆಯ ಕಂಬಳಿಯರಸರು, ಕುಂಬಳೆಯ ಅರಸರು, ಪುತ್ತಿಗೆ-ಮೂಡಬಿದರೆಯ ಚೌಟ ಅರಸರು, ಬಂಗಾಡಿಯ ಬಂಗರು, ಮೂಲಿಕೆಯ ಸಾವಂತರಸರು, ವೇಣೂರಿನ ಅಜಿಲರಸರು, ವಿಟ್ಲದ ಡೊಂಬ ಹೆಗ್ಗಡೆ ಅರಸರು ಮುಂತಾದವರ ಬಗ್ಗೆ ವಿವರಣಾತ್ಮಕವಾದ ಮಾಹಿತಿಗಳು ಇವೆ.

ಬಿ. ಸುರೇಂದ್ರ ರಾವ್‌ರವರ 'ಬಂಟ್ಸ್ ಇನ್ ಹಿಸ್ಟರಿ ಅಂಡ್ ಕಲ್ಚರ್' (2010) ಎಂಬ ಕೃತಿಯು ದಕ್ಷಿಣ ಕನ್ನಡದ ಪ್ರಮುಖ ಸಮುದಾಯಗಳಲ್ಲಿ ಒಂದಾದ ಬಂಟ ಸಮುದಾಯ ಕುರಿತು ಬರೆದ ಕೃತಿಯಾಗಿದೆ. ಬಿ. ಸುರೇಂದ್ರ ರಾವ್‌ರವರು ತಮ್ಮ ಕೃತಿ 'ಬಂಟ್ಸ್ ಇನ್ ಹಿಸ್ಟರಿ ಅಂಡ್ ಕಲ್ಚರ್'ನಲ್ಲಿ ಬಂಟರ ಮೂಲದ ಕುರಿತು ಸ್ಪಷ್ಟವಾದ ದಾಖಲೆಗಳು ಲಭ್ಯವಿಲ್ಲದಿರುವುರಿಂದ ಅವರ ಮೂಲದ ಕುರಿತು ಹೆಚ್ಚೇನು ಹೇಳಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಬಂಟರಲ್ಲಿ ಹೆಚ್ಚಿನವರು ರೈತರಾಗಿದ್ದು ಹಾಗೆಯೇ ಉಳಿದರೆ, ಕೆಲವರು ಆರ್ಥಿಕ ಮತ್ತು ಸಾಮಾಜಿಕ ಅಧಿಕಾರಗಳ ಮೂಲಕ ಪ್ರಮುಖ್ಯತೆಯನ್ನು ಪಡೆದರು. ತಮ್ಮ ಸಮುದಾಯವನ್ನು ತುಳುವಿನಲ್ಲಿ 'ಒಕ್ಕೆಲ್ಮ' ಕರೆಯುವುದನ್ನು ಬಯಸುತ್ತಾರೆ. ಬಂಟ ಹೆಸರಿಗಿಂತ ಹೆಚ್ಚಾಗಿ ಈ ಜಾತಿಯು ತುಳುವಿನಲ್ಲಿ 'ಒಕ್ಕೆಲ್ಮ'

ಎಂದೂ ಕನ್ನಡ ಮಾತನಾಡುವ ಪ್ರದೇಶಗಳಲ್ಲಿ 'ಶೆಟ್ಟಿ' ಎಂದು ಗುರುತಿಸಲ್ಪಡುತ್ತಿತ್ತು. ಬಂಟರು ಗುತ್ತುಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ ಎಂಬುದನ್ನು ವಿವರಿಸುವ ಸಂದರ್ಭದಲ್ಲಿ ದಕ್ಷಿಣ ಕನ್ನಡದ ಗುತ್ತುಗಳ ಕುರಿತು ಬರೆಯುತ್ತಾರೆ. 'ಗುತ್ತು' ಎಂಬುದು ತುಳು ಪದವಾಗಿದೆ ಎಂದು ಬಿ. ಸುರೇಂದ್ರ ರಾವ್‌ರವರು ಅಭಿಪ್ರಾಯ ಪಡುತ್ತಾರೆ. ಗುತ್ತು ಎಂಬ ಪದದ ಬಳಕೆಯು ದಕ್ಷಿಣ ಕನ್ನಡದ ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ಕಂಡು ಬರುವುದಿಲ್ಲ. ಗುತ್ತು ಪದವನ್ನು ಸಾಮಾನ್ಯವಾಗಿ ಮನೆ ಪದಕ್ಕೆ ಪರ್ಯಾಯವಾಗಿ ಬಳಸುವುದಿಲ್ಲ ಎಂದು ಬಿ. ಸುರೇಂದ್ರ ರಾವ್‌ರವರು ಅಭಿಪ್ರಾಯ ಪಡುತ್ತಾರೆ. 'ಗುತ್ತು' ತುಳುವ ಊಳಿಗ ಸಂಸ್ಕೃತಿಯ ಕೇಂದ್ರವಾಗಿದ್ದು, ತುಳುವ ಊಳಿಗ ಮಾನ್ಯ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಗುತ್ತಿನ ಮನೆಗಳು ಗ್ರಾಮಗಳ ಅಧಿಕಾರದ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಗ್ರಾಮಗಳಲ್ಲಿ ದೈವಾರಾಧನೆಯಲ್ಲಿ ಗುತ್ತುಮನೆಗಳ ಪಾತ್ರ, ಗ್ರಾಮಗಳಲ್ಲಿರುವ ವಿವಿಧ ಜಾತಿ ಸಮುದಾಯಗಳು, ಅವರು ಅನುಸರಿಸುತ್ತಿರುವ ವೃತ್ತಿಗಳು ವಂಶಪಾರಂಪರ್ಯವಾಗಿ ಗುತ್ತಿನ ಮನೆಗಳೊಂದಿಗೆ ಸಂಬಂಧವನ್ನು ಅವರು ಗುರುತಿಸಿದ್ದಾರೆ. ಗುತ್ತಿನ ಯಜಮಾನಿಕೆಯಲ್ಲಿ ಮಾತೃ ಪ್ರಧಾನತೆಯನ್ನು ಅನುಸರಿಸಲಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ಇಂದಿರಾ ಹೆಗ್ಗಡೆಯವರ 'ಬಂಟರು-ಒಂದು ಸಮಾಜೋ-ಸಾಂಸ್ಕೃತಿಕ ಅಧ್ಯಯನ' (2004) ಎಂಬ ಕೃತಿಯು ಬಂಟ ಸಮಾಜದ ಕುರಿತ ಸಮಗ್ರ ಅಧ್ಯಯನವಾಗಿದ್ದು, ತುಳುನಾಡಿನಲ್ಲಿ ಬಂಟರ ಆಚಾರ-ವಿಚಾರಗಳು, ಗ್ರಾಮೀಣ ಆಡಳಿತದಲ್ಲಿ ಬಂಟರ ಗುತ್ತುಗಳು, ಗುತ್ತುವಿನ ಅಧಿಕಾರಗಳು, ಆರಾಧನಾ ಸಂಪ್ರದಾಯಗಳು, ಅಳಿಯ ಸಂತಾನ ಕಟ್ಟು, ಜಾನಪದ ಕ್ರೀಡೆಗಳು ಮುಂತಾದ ವಿಷಯಗಳ ಬಗ್ಗೆ ಚಿತ್ರಣವನ್ನು ನೀಡುತ್ತವೆ. 'ಗುತ್ತು' ಎಂಬುದು 'ಗೊತ್ತು' ಎಂಬ ಪದದಿಂದ ಉತ್ಪತ್ತಿಯಾಗಿದೆ. ಇದೊಂದು ದ್ರಾವಿಡ ಭಾಷೆಯ ಪದವಾಗಿದೆ. 'ಗೊತ್ತು' ಎಂದರೆ ಮೂಲ ಆಶ್ರಯ, ಆದಿ ನೆಲೆ ಎಂಬರ್ಥವನ್ನು ಹೊಂದಿದೆ ಎಂದು ಇಂದಿರಾ ಹೆಗ್ಗಡೆಯವರು ಅಭಿಪ್ರಾಯ ಪಡುತ್ತಾರೆ.

ಇಂದಿರಾ ಹೆಗ್ಗಡೆಯವರ ಕೃತಿ 'ತುಳುನಾಡಿನ ಗ್ರಾಮಡಳಿತ ಮತ್ತು ಅಜಲುಗಳು' (2004) : ತುಳುನಾಡಿನ ಜನರು ಪ್ರಾಚೀನ ಕಾಲದಿಂದಲೂ ತಮ್ಮದೇ ಆದ ತುಳುವ ಸಂಸ್ಕೃತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ಪ್ರತಿಯೊಂದು ಜಾತಿಯವರು ನಿರ್ವಹಿಬೇಕಾದ ಕರ್ತವ್ಯಗಳನ್ನು ನಿರ್ದೇಶಿಸುವ ಕಟ್ಟುಕಟ್ಟಳೆಗೆ ಅಜಲು ಪದ್ದತಿ ಎನ್ನುವರು ಎಂದು ಅವರು ಈ ಕೃತಿಯಲ್ಲಿ ಅಭಿಪ್ರಾಯ ಪಡುತ್ತಾರೆ.

ಗ್ರಾಮಾಡಳಿತದಲ್ಲಿ ಗುತ್ತುಗಳ ಪಾತ್ರ, ಗಡಿ ಹಿಡಿಯುವ ಪದ್ಧತಿ, ಗ್ರಾಮದಲ್ಲಿ ಇದ್ದ ಅಜಲುಗಳು, ಸಮಾಜದಲ್ಲಿ ಎಲ್ಲಾ ಜಾತಿ ವರ್ಗದವರ ಜವಾಬ್ದಾರಿಗಳು, ಪತ್ತೇರಿ ಕೂಟ ಮುಂತಾದ ವಿಷಯಗಳ ಕುರಿತು ಬರೆದಿದ್ದಾರೆ.

ಡಾ. ಎಸ್. ಡಿ ಶೆಟ್ಟಿ, ಅವರ 'ತುಳುನಾಡಿನ ಜೈನಧರ್ಮ- ಒಂದು ಸಾಂಸ್ಕೃತಿಕ ಅಧ್ಯಯನ' (2002) : ಈ ಕೃತಿಯು ತುಳುನಾಡಿನಲ್ಲಿ ಜೈನಧರ್ಮದ ಉಗಮ ಮತ್ತು ಬೆಳವಣಿಗೆಗಳ ಮಾಹಿತಿಯನ್ನು ಒಳಗೊಂಡಿದೆ. ಜೈನರು ಮೊದಲು ವ್ಯಾಪಾರಿಗಳಾಗಿ ಗುರುತಿಸಿಕೊಂಡಿದ್ದು, ಮೂಡಬಿದಿರೆ, ಕಾರ್ಕಳ, ವೇಣೂರು, ಬಾರ್ಕೂರು, ಹಟ್ಟಿಯಂಗಡಿ, ಬೆಳ್ತಂಗಡಿ ಮುಂತಾದ ಕೇಂದ್ರಗಳು ಜೈನ ಕೇಂದ್ರಗಳಾಗಿ ಹಾಗೂ ವ್ಯಾಪಾರ ಕೇಂದ್ರಗಳಾಗಿ ಬೆಳೆದವು. ನಾಡಿನ ಆರ್ಥಿಕ ಹಿಡಿತ ಇವರ ಕೈಯಲ್ಲಿದ್ದುದರಿಂದ ಕ್ರಮೇಣ ರಾಜಕೀಯದಲ್ಲೂ ಸಕ್ರಿಯರಾಗಿ ಭಾಗವಹಿಸಲಾರಂಭಿಸಿ ಮುಂದೆ ಅರಸರಾಗಿ ಅಧಿಕಾರದ ಚುಕ್ಕಾಣಿಯನ್ನು ಹಿಡಿದರು. ತುಳುನಾಡನ್ನು ಆಳಿದ ಹೆಚ್ಚಿನ ಜೈನ ಮನೆತನಗಳು ಜೈನ ಶ್ರೇಷ್ಠಿವರ್ಗಕ್ಕೆ ಸೇರಿದವರಾಗಿದ್ದಾರೆ. ವಿಜಯನಗರ ಅರಸರ ಕಾಲದಲ್ಲಿ ತುಳುನಾಡಿನಲ್ಲಿ ಜೈನಧರ್ಮವು ಉನ್ನತ ಸ್ಥಿತಿಗೆ ತಲುಪಿತು. ವಿಜಯನಗರ ದೊರೆಗಳು ಪ್ರಬಲರಾದಾಗ ತುಳುನಾಡಿನ ತುಂಡರಸರು ಅವರ ದಾಳಿಯನ್ನು ಎದುರಿಸದೆ ಅವರ ಸಾಮಂತರಾದರು. ಹಾಗೆಯೇ ವಿಜಯನಗರ ದೊರೆಗಳ ಕಾಲದಲ್ಲಿ ಅನೇಕ ಸಣ್ಣ ಪುಟ್ಟ ಅರಸು ಜೈನ ಮನೆತನಗಳು ತುಳುನಾಡಿನಲ್ಲಿ ಏಳಿಗೆಯನ್ನು ಕಂಡವು. ಮೂಲಿಕೆಯ ಸಾವಂತರಸರು, ವೇಣೂರಿನ ಅಜಿಲರು, ಪುತ್ತಿಗೆ-ಮೂಡಬಿದರೆಯ ಚೌಟ ಅರಸರು, ಉಡುಪಿಯ ಸೂರಾಲಿನ ತೋಳಹರು, ಪುತ್ತಿಗೆ-ಮೂಡಬಿದರೆಯ ಚೌಟ ಅರಸರು, ಹಾಗೆಯೇ ಅನೇಕ ಹೆಗ್ಗಡೆಯರು ಹಾಗೂ ಬಲ್ಲಾಳರು ಕೂಡ ತಮ್ಮ ತಮ್ಮ ಪ್ರದೇಶಗಳಲ್ಲಿ ಪಾಧಾನ್ಯತೆಯನ್ನು ಗಳಿಸಿಕೊಂಡಿದ್ದರು. ತುಳುನಾಡಿನಲ್ಲಿ ಜೈನರು ಎನ್ನುವುದು ಜೈನಮತೀಯರ ಒಂದು ಒಳಪಂಗಡವಾಗಿದ್ದು, ಇವರು ತುಳುನಾಡಿನ ಮೂಲನಿವಾಸಿಗಳಲ್ಲಿ ಒಂದು ಪಂಗಡಕ್ಕೆ ಸೇರಿದವರಾಗಿರಬೇಕು. ಇವರ ಆಕಾರ, ಮಾತನಾಡುವ ತುಳುಭಾಷೆ, ಜೈನಶೆಟ್ಟರಿಗಿಂತಲೂ ಭಿನ್ನವಾದುದು. ವ್ಯವಸಾಯ, ಗೋಪಾಲನೆ ಇವರ ಮುಖ್ಯ ವೃತ್ತಿ. ಇವರನ್ನು ಹಳ್ಳಿ ಜೈನರೆಂದೂ ಕರೆಯುತ್ತಾರೆ. ಜೈನರು ಎನ್ನುವ ಒಳ ಪಂಗಡವು ಮೂಲದಲ್ಲಿ ನಾಡವರು ಅಥವಾ ಬಂಟರಾಗಿದ್ದವರು ಎಂದು ವಿವಿಧ ಬರಹಗಳು ಸ್ಪಷ್ಟ ಪಡಿಸುತ್ತದೆ. ಇವರು ಮತಾಂತರ ಹೊಂದಿದವರು. ಮತಾಂತರ ಹೊಂದುವ ಮೊದಲಿದ್ದ ಆಚರಣೆಗಳನ್ನು ಇವರು ಕೈ ಬಿಡದೆ ಅದನ್ನು ಆಚರಿಸಿಕೊಂಡು ಬಂದಿದ್ದಾರೆ. ಅವರ ಕೌಟುಂಬಿಕ ಹೆಸರುಗಳಾದ ಚೌಟ, ಆಳ್ವ, ಪಕ್ಕಳ, ಅಜಿರಿ, ಬಂಗ, ಪಾಂಡಿ, ಅರಿಗ, ಕುದುರೆ, ಹೆಗ್ಗಡೆ, ಮಾರ್ಲ, ಅತಿಕಾರಿ, ಪೂಂಜ, ಸೇಮಿತ, ಭಂಡಾರಿ, ಬಲ್ಲಾಳ, ಮುರಾಯ, ಪೂವಣಿ, ಕಡಂಬ, ಮುದ್ಯ, ಕಾಜವ,

ಬಲಿಪ, ಮಲ್ಲ, ಪಡಿವಾಳ, ಯಾದವ, ಕಂಬಳಿ, ಭಿನ್ನಾಣಿ, ಕೊಟ್ಟಾರಿ, ಅರಸ, ಪಾಲ, ಸಾಮಣಿ, ಸಾಮಂತ, ಭೋಜ, ರಾಜ, ಮತ್ತು ಸೆಟ್ಟಿ ಇವುಗಳು ಹಿಂದಿನಂತೆಯೇ ಇವೆ. ಇವುಗಳು ಬಂಟರಿಂದ ಬಂದವುಗಳು. ಇವರು ತಮ್ಮ ಆಚರಣೆಗಳಲ್ಲಿ ಬಂಟರನ್ನು ಹೋಲುತ್ತಾರೆ. ಬಂಟರು ಮತ್ತು ಜೈನರಲ್ಲಿ ಕೆಲವು ಸಮಾನ ಅಂಶಗಳನ್ನು ಕೆಲವು ವಿದ್ವಾಂಸರು ಗುರುತಿಸಿದ್ದಾರೆ. ಇಬ್ಬರೂ ಸಮಾನವಾದ ಉಪನಾಮಗಳನ್ನು, ಬಳಿಗಳನ್ನು ಹೊಂದಿದ್ದಾರೆ ಎಂದು ಅಭಿಪ್ರಾಯ ಪಡುತ್ತಾರೆ.

ಪೀಟರ್ ಜೆ ಕ್ಲಾಸ್‌ರ 'ತುಳುವ ದರ್ಶನ' - ಪೀಟರ್ ಜೆ ಕ್ಲಾಸ್‌ರ ಈ ಕೃತಿಯನ್ನು ಕನ್ನಡದಲ್ಲಿ ಎ.ವಿ.ನಾವಡರು ಅನುವಾದಿಸಿದ್ದಾರೆ. ತುಳುನಾಡಿನಲ್ಲಿರುವ ಬಂಧುತ್ವ ವ್ಯವಸ್ಥೆ, ಜಾತಿ ವ್ಯವಸ್ಥೆ, ತುಳುನಾಡಿನ ಗ್ರಾಮಗಳಲ್ಲಿ ಗ್ರಾಮದೊಡೆಯನ ಅಥವಾ ಜಮೀನ್ದಾರನ ಪಾತ್ರಗಳ ಮೇಲೆ ಬೆಳಕು ಚೆಲ್ಲುತ್ತವೆ. ಆ ಕೃತಿಯಲ್ಲಿ ಬರುವ ಮೈಂದಲ ಪಾಡ್ದನವು ಪ್ರಾಚೀನ ತುಳುವ ಸಮಾಜದಲ್ಲಿ ಪಾಂಗೊಲ್ಲ ಬನ್ನಾರರಂತಹ ಅನೇಕ ಸಾಮಂತ ಪಾಳೆಯಗಾರರ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಈ ತುಂಡರಸರ ಗುತ್ತಿನ ಮನೆಗಳು ರಾಜ್ಯದ ರಾಜಕೀಯ ಹಾಗೂ ಧಾರ್ಮಿಕ ಬದುಕಿನ ಕೇಂದ್ರಗಳಾಗಿದ್ದವು. ದೊರೆಗಳು ತಮ್ಮ ಅರಮನೆಯ ಚಾವಡಿಯಲ್ಲಿ ಓಲಗ ಕೊಡುತ್ತಿದ್ದರು. ರಾಜ್ಯಾಧಿಪತಿಯಾದ ದೊರೆ ಹಾಗೂ ದೈವಗಳು ಕ್ಷೇತ್ರದ ನೈತಿಕ ವ್ಯವಸ್ಥೆ ಮತ್ತು ಅಧಿಕಾರವನ್ನು ಸಂಕೇತಿಸುತ್ತಿದ್ದು ಲೌಕಿಕ ಮತ್ತು ಅಲೌಕಿಕಗಳೆರಡನ್ನೂ ನಿಯಂತ್ರಿಸುತ್ತಿದ್ದರು ಎಂದು ಅಭಿಪ್ರಾಯ ಪಡುತ್ತಾರೆ. ತುಳುನಾಡಿನ ಸಾಮಾಜಿಕ ರಚನೆಯು ಊಳಿಗಮಾನ್ಯ ಶ್ರೇಣಿ ವ್ಯವಸ್ಥೆಯ ಮೇಲೆ ಆಧರಿತವಾಗಿದೆ. ತುಳುವ ರಾಜ್ಯದ ಪ್ರತಿ ಮನೆ ಹಾಗೂ ಗ್ರಾಮಗಳಲ್ಲಿ ಈ ರೀತಿಯ ಶ್ರೇಣಿ ವ್ಯವಸ್ಥೆಯು ಕಂಡು ಬರುತ್ತಿದ್ದು ಅವುಗಳು ಒಂದು ಸೂಕ್ಷ್ಮ ವಿಶ್ವದ ರೂಪದಲ್ಲಿ ತೋರಿ ಬರುತ್ತದೆ. ಮನೆಗಳು ಹಾಗೂ ಗ್ರಾಮಗಳು ತಮ್ಮ ಉತ್ಪನ್ನದ ಒಂದು ಭಾಗವನ್ನು ಗ್ರಾಮಾಧಿಪತಿಗೂ, ಗ್ರಾಮಾಧಿಪತಿಗಳು ತಮ್ಮ ಉತ್ಪನ್ನದ ಒಂದು ಭಾಗವನ್ನು ರಾಜ್ಯಾಧಿಪತಿಗೂ ಗೌರವ ಕಾಣಿಕೆಯಾಗಿ ಕೊಡಬೇಕಾಗುತ್ತದೆ. ಪ್ರಾಚೀನ ತುಳುವ ಧಾರ್ಮಿಕ ಸಂಕೀರ್ಣ ರಚನೆಯು ಅರಸನ(ಸ್ಥಳೀಯ ಜಮೀನ್ದಾರ ಅಥವಾ ಆಳರಸ) ಅವರ ಪೂರ್ವಿಕರ ದೈವಗಳ ಹಾಗೂ ವನದೇವತೆ(ಬೆರ್ಮೆರ್) ಸುತ್ತ ಕೇಂದ್ರೀಕೃತವಾಗಿದ್ದಿರಬೇಕು. ಅರಸು ಆರಾಧನಾ ಪದ್ಧತಿಯಲ್ಲಿ ರಾಜನು ಸಮಾಜದ ಕೇಂದ್ರವಾಗಿದ್ದು ರಾಜನ ಕ್ಷೇಮಾಭ್ಯುದಯವು ಸಮಾಜದಲ್ಲಿ ಮಹತ್ವದ ಸಂಗತಿಯಾಗಿತ್ತು. ಎಲ್ಲಾ ಧಾರ್ಮಿಕ ಆಚರಣೆಗಳೂ ಅರಸನ ಅಥವಾ ಅವನ ಪರಿವಾರದಿಂದಲೇ ನಡೆಯಬೇಕಿತ್ತು. ಆದರೆ ಸಣ್ಣ ಪುಟ್ಟ ವಿಧಿವಿಧಾನಗಳನ್ನು ಇತರರಿಗೆ ಒಪ್ಪಿಸುವುದೂ ಇತ್ತು. ಏನಿದ್ದರೂ ರಾಜ್ಯದೊಳಗೆ ಅರಸನು ಅತ್ಯಂತ

ಶ್ರೇಷ್ಠನೆಂದೂ, ಆರಾಧನಾ ವಿಧಿಗಳನ್ನು ನಡೆಸುವವರ ಕೇಂದ್ರ ವ್ಯಕ್ತಿಯೆಂದೂ ಪರಿಗಣಿಸಲಾಗುತ್ತಿತ್ತು. ಜನಸಾಮಾನ್ಯರನ್ನು ಮುನ್ನಡೆಸುವ ಹಾಗೂ ಅಲೌಕಿಕ ಶಕ್ತಿಗಳನ್ನು ಎದುರಿಸುವ ಹೊಣೆಗಾರಿಕೆ ಅರಸನದಾಗಿತ್ತು. ತನ್ನ ಸೇವಕ ವರ್ಗದವರಿಗೆ ಕೆಲವೊಂದು ಆರಾಧನಾ ವಿಧಿವಿಧಾನಗಳನ್ನು ನಡೆಸುವ ಹಕ್ಕನ್ನು ಅರಸನು ವರ್ಗಾಯಿಸಬಹುದು. ಅರಸು ಆರಾಧನೆಯ ಸಂದರ್ಭದ ಈ ಕರ್ತವ್ಯಗಳು ಹುದ್ದೆಯ ಸ್ವರೂಪದವುಗಳಾಗಿದ್ದು ಕ್ರಮೇಣ ಅನುವಂಶಿಕ ಸ್ವರೂಪವನ್ನು ಪಡೆದುಕೊಂಡವು ಎಂಬ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಾರೆ. ದೈವಾರಾಧನೆಯ ಕುರಿತು ಬರೆಯುತ್ತಾ, ಗ್ರಾಮದ ವಾರ್ಷಿಕ ನೇಮಗಳಲ್ಲಿ ದೈವಗಳು ವೇಷಾಲಂಕೃತ ಭೂತ ನರ್ತಕನಲ್ಲಿ ಪ್ರಕಟಗೊಂಡು ಬೇರೆ ಜಾತಿ ವರ್ಗಗಳನ್ನು ವೈಭವೀಕರಿಸಿ ಪ್ರತಿನಿಧೀಕರಿಸುತ್ತದೆ. ಈ ನೇಮ ಸಮಾರಂಭಗಳಲ್ಲಿ ಗ್ರಾಮದ ವಿಭಿನ್ನ ಜಮೀನ್ದಾರಿ ಮನೆತನಗಳ ಹಿರಿಯರಾದ ಗುರಿಕಾರರು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾರೆ. ನೇಮದ ಪೂರ್ವತಯಾರಿಯ ಏರ್ಪಡುಗಳನ್ನು ನಿರ್ದೇಶಿಸುವುದು, ದೈವ ಮಾಧ್ಯಮರಿಗೆ ದೈವಗಳನ್ನು ಅವರ ದೇಹದೊಳಗೆ ಆವಾಹಿಸಿಕೊಳ್ಳಲು ಅನುಮತಿ ನೀಡುವುದು, ದೈವಗಳನ್ನು ಪ್ರಾರ್ಥಿಸಿ ಅವುಗಳನ್ನು ಎದುರುಗೊಳ್ಳುವುದು, ಗ್ರಾಮಸ್ಥರ ಪರವಾಗಿ ದೈವಗಳಿಗೆ ಆಹಾರ, ಕಾಣಿಕೆಗಳನ್ನು ಅರ್ಪಿಸುವುದು ಮತು ಸಮಸ್ತರ ಪರವಾಗಿ ಆಶೀರ್ವಾದಗಳನ್ನು ಪಡೆಯುವುದು ಈ ಗುರಿಕಾರರ ಹೊಣೆಗಾರಿಕೆಗಳಾಗಿವೆ. ಗುರಿಕಾರರು ಬೇರೆ ವಿಷಯಗಳಲ್ಲಿ ಪರಿಣತರಿಂದ ಸಲಹೆಗಳನ್ನು ಪಡೆಯುತ್ತಾರಾದರೂ ಮೇಲೆ ಹೇಳಿದ ಕರ್ತವ್ಯಗಳನ್ನು ಸ್ವತಃ ಅವರೇ ಮಾಡಬೇಕು. ನೇಮಗಳಲ್ಲಿ ಜಾತಿ ಪರಿಣತರ ವೃತ್ತಿಪರ ಕರ್ತವ್ಯಗಳಾಗಿ ಕಾಣಿಸಿಕೊಳ್ಳುತ್ತವೆ. ಸಹಜವಾಗಿ ವಿವಿಧ ಜಾತಿಯ ಪರಿಣತರ ಕರ್ತವ್ಯಗಳು ಅವರ ಕುಲಕಸುಬಿಗೆ ಹೊಂದಿಕೊಂಡಿರುತ್ತವೆ. ಉದಾಹರಣೆಗೆ ದೇವಾಡಿಗ(ಸೇರಿಗಾರ-ಸಂಗೀತ ವಾದ್ಯವನ್ನು ನುಡಿಸುವವನು) ಜಾತಿಯವರು ನೇಮಗಳಿಗೆ ಸಂಗೀತ ಒದಗಿಸುತ್ತಾರೆ. ಬಡಗಿಗಳು ಮರದ ತೋರಣ(ಮಕರ ತೋರಣ ಇತ್ಯಾದಿ)ಗಳನ್ನು ಕಟ್ಟಬೇಕು. ಗಾಣಿಗರು ದೀವಟಿಗೆ ಹಿಡಿಯಬೇಕು ಎಂಬ ಮಾಹಿತಿಗಳು ಈ ಕೃತಿಯಿಂದ ಸಿಗುತ್ತವೆ.

ಕೆ. ಚಿನ್ನಪ್ಪ ಗೌಡರವರ 'ಭೂತಾರಾಧನೆ - ಜಾನಪದೀಯ ಅಧ್ಯಯನ' (1990) : ಕರಾವಳಿಯ ದೈವಾರಾಧನೆಯ ಕುರಿತು ಕೆ. ಚಿನ್ನಪ್ಪ ಗೌಡರು ರಚಿಸಿದ 'ಭೂತಾರಾಧನೆ- ಜಾನಪದೀಯ ಅಧ್ಯಯನ' ಎಂಬ ಕೃತಿಯು ದೈವಾರಾಧನೆಯ ವಿವಿಧ ಆಯಾಮಗಳ ಮೇಲೆ ಬೆಳಕು ಚೆಲ್ಲುತ್ತದೆ. ಈ ಕೃತಿಯಲ್ಲಿ ಭೂತಾರಾಧನೆಯು ತುಳುನಾಡಿನ ಸಮಾಜ ಮತ್ತು ಇತಿಹಾಸದ ಭಾಗವಾಗಿದ್ದು ಇದು ಕೇವಲ

ಮನೋರಂಜನೆಗಾಗಿ ಇರುವ ರಂಗ ಸಂಪ್ರದಾಯವಲ್ಲ, ತುಳುನಾಡಿನಲ್ಲಿ ಭೂತಾರಾಧನೆಯು ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ, ನ್ಯಾಯಾಂಗ ವ್ಯವಸ್ಥೆಯಾಗಿ ಕೆಲಸ ಮಾಡುತ್ತಾ ಬಂದಿದೆ. ಗ್ರಾಮಗಳಲ್ಲಿ ಭೂತಾರಾಧನೆಯಲ್ಲಿ ಗುತ್ತುಗಳ ಪಾತ್ರದ ಕುರಿತು ಬರೆದಿದ್ದಾರೆ. ತುಳುನಾಡಿನ ಆಡಳಿತ ವ್ಯವಸ್ಥೆಯ ಜೊತೆಗೆ ದೈವಾರಾಧನೆಯು ಪ್ರಧಾನವಾದ ಸಂಬಂಧವನ್ನು ಪಡೆದುಕೊಂಡಿದೆ. ಆಡಳಿತ ವ್ಯವಸ್ಥೆಯ ಒಂದು ಭಾಗವಾಗಿ ದೈವಾರಾಧನೆಯು ಉಳಿದುಕೊಂಡು ಬಂದಿರುವುದನ್ನು ಚಾರಿತ್ರಿಕ ಅಧ್ಯಯನದಿಂದ ತಿಳಿದುಕೊಳ್ಳಬಹುದು. ವಿಜಯನಗರ ಅರಸರ ಕಾಲದ ತುಳುನಾಡಿನ ರಾಜಕೀಯ ಹಾಗೂ ಆಡಳಿತ ವ್ಯವಸ್ಥೆಯ ಜೊತೆಗೆ ಭೂತಾರಾಧನೆಯ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯನ್ನು ಹೋಲಿಸಿ ನೋಡಿದಾಗ ಇವು ಸಮಾನಾಂತರವಾದ ಎರಡು ವ್ಯವಸ್ಥೆಗಳಾಗಿ ಕಂಡು ಬರುತ್ತವೆ. ಭೂತಾರಾಧನೆಯು ಕೂಡ ಒಂದು ರಾಜಕೀಯ ಆಡಳಿತಾತ್ಮಕ ಘಟಕವಾಗಿದೆ. ಭೂತಗಳನ್ನು ಪ್ರಾದೇಶಿಕ ಅಧಿಕಾರಕ್ಕೆ ಅನುಗುಣವಾಗಿ ಅವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು. 1. ಸೀಮೆ ಭೂತಗಳು, ನಾಡು ಭೂತಗಳು, 2. ಮಾಗಣೆ ಭೂತಗಳು, 3. ಗ್ರಾಮ ಭೂತಗಳು- ಊರು ಭೂತಗಳು 4. ಗುತ್ತಿನ ಭೂತಗಳು 5. ಕುಟುಂಬದ ಭೂತಗಳು. ಸೀಮೆಯ ಆಡಳಿತವನ್ನು ನೋಡಿಕೊಳ್ಳುವ ಅರಸನಿಗೆ ಸಂವಾದಿಯಾಗಿಯೂ, ಪ್ರತಿನಿಧಿಯಾಗಿಯೂ ಸೀಮೆ ಭೂತವು ಕಾಣಿಸಿಕೊಳ್ಳುತ್ತದೆ. ಇದೇ ರೀತಿಯಲ್ಲಿ ಮಾಗಣೆ, ಗ್ರಾಮ, ಗುತ್ತು ಹಾಗೂ ಕುಟುಂಬ ಮಟ್ಟದಲ್ಲಿ ಈ ಘಟಕಗಳ ಆಡಳಿತವನ್ನು ನೋಡಿಕೊಳ್ಳುವ ಮುಖ್ಯಸ್ಥನಿಗೆ ಸಮಾನಾಂತರವಾಗಿ ಮಾಗಣೆ ಭೂತ, ಗ್ರಾಮ ಭೂತ, ಗುತ್ತಿನ ಭೂತ ಹಾಗೂ ಕುಟುಂಬದ ಭೂತಗಳು ಕಾಣಿಸಿಕೊಳ್ಳುತ್ತವೆ. ತುಳುನಾಡಿನ ಆಡಳಿತ ಘಟಕಗಳಾದ ಸೀಮೆ, ಮಾಗಣೆ, ಬೀಡು, ಗ್ರಾಮ, ಗುತ್ತು ಇವುಗಳ ಮುಖ್ಯಸ್ಥರು ತಮ್ಮ ರಾಜಕೀಯ ಅಧಿಕಾರವನ್ನು ಸ್ವೀಕರಿಸುವಾಗ ಭೂತದ ಪ್ರತಿನಿಧಿಯಾಗಿ ಅಧಿಕಾರ ಸ್ವೀಕರಿಸುತ್ತಾರೆ ಹಾಗೂ ಭೂತದ ಪ್ರತಿನಿಧಿಯಾಗಿ ಆಡಳಿತ ನಡೆಸುವ ಪ್ರಮಾಣವನ್ನು ಸ್ವೀಕರಿಸುತ್ತಾರೆ ಮುಂತಾದ ಮಾಹಿತಿಗಳು ಈ ಕೃತಿಯಲ್ಲಿ ಸಿಗುತ್ತವೆ.

ಡಾ. ಎಂ. ದೇಜಪ್ಪ ದಲ್ಲೋಡಿಯವರ ಕೃತಿ ‘ಬಿಲ್ಲವರ ಸಾಂಸ್ಕೃತಿಕ ಸಂಪದ’(2012): ಬಿಲ್ಲವ ಸಮುದಾಯದ ಕುರಿತು ಸಮಗ್ರವಾದ ಮಾಹಿತಿಯನ್ನು ಈ ಕೃತಿಯು ನೀಡುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತರ ಸಮುದಾಯಗಳಿಗೆ ಹೋಲಿಸಿದಾಗ ಬಿಲ್ಲವರು ಬಹುಸಂಖ್ಯಾತರಾಗಿದ್ದು, ತುಳುನಾಡಿನೊಂದಿಗೆ ಬಿಲ್ಲವ ಸಮಾಜದ ನಂಟು ಪುರಾತನವಾದದ್ದು, ಐತಿಹಾಸಿಕವಾಗಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ

ಕ್ಷೇತ್ರಗಳಲ್ಲಿ ಅವರು ತಮ್ಮದೇ ಆದ ಛಾಪನ್ನು ಬೀರಿದ್ದಾರೆ. ತುಳುನಾಡಿನ ನೆಲಕ್ಕೂ ಬಿಲ್ಲವ ಸಮುದಾಯದ ಜನರಿಗೂ ಇರುವ ನಿಕಟ ಸಂಬಂಧ, ನಾಡಿನ ಅನ್ಯ ಜಾತಿಯವರಿಗೂ ಬಿಲ್ಲವರಿಗೂ ಇರುವಂತಹ ಸೌಹಾರ್ದ ಜೀವನದ ಬಗ್ಗೆ, ಮುಖ್ಯವಾಗಿ ಬಂಟ, ಬಿಲ್ಲವ, ಮೊಗವೀರರ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯಗಳನ್ನು ತೌಲನಿಕವಾಗಿ ವಿಮರ್ಶಿಸಿ ಅವುಗಳ ಸಾಮ್ಯತೆ ಮತ್ತು ಭಿನ್ನತೆಗಳನ್ನು ಗುರುತಿಸಿದ್ದಾರೆ.

ರಮಾನಾಥ ಕೋಟೆಕಾರ್, 'ತುಳುನಾಡಿನ ಬಿಲ್ಲವರು- ಒಂದು ಅಧ್ಯಯನ' (2012) : ಕೋಟೆಕಾರ್‌ರವರು ದಕ್ಷಿಣ ಕನ್ನಡದ ಬಿಲ್ಲವರ *ಕುರಿತು* 'ತುಳುನಾಡಿನ ಬಿಲ್ಲವರು- ಒಂದು ಅಧ್ಯಯನ' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ತುಳುನಾಡಿನ ಗ್ರಾಮ ವ್ಯವಸ್ಥೆಯಲ್ಲಿ ಆಡಳಿತಾತ್ಮಕವಾಗಿ, ಧಾರ್ಮಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಬಿಲ್ಲವರ ಸ್ಥಾನಮಾನ, ಬಿಲ್ಲವರ ಗುತ್ತು, ಬರ್ಕೆಗಳು, ಭಂಡಾರದ ಮನೆಗಳು, ದೈವಸ್ಥಾನಗಳು, ಗರಡಿಮನೆಗಳ ಬಗ್ಗೆ ಈ ಕೃತಿಯಲ್ಲಿ ವಿವರಿಸಲಾಗಿದೆ. ಬಿಲ್ಲವರ ಗುತ್ತು, ಬರ್ಕೆಗಳು ಬಿದ್ದುಹೋಗಲು ಕಾರಣಗಳನ್ನು ಇವರು ಗುರುತಿಸಿದ್ದಾರೆ.

ಶೇಖರರವರ 'ಬಂಟರು- ಬದುಕು ಮತ್ತು ಬದಲಾವಣೆ' (2009) - ಕೃತಿಯು ಬಂಟ ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಅಳಿಯ ಕಟ್ಟು ಪದ್ಧತಿ, ಮಹಿಳೆಯ ಸ್ಥಾನಮಾನ, ವಿವಾಹ, ಕುಟುಂಬ ಹಾಗೂ ಇತರ ಸಾಮಾಜಿಕ ವಿಷಯಗಳಲ್ಲಿ ಆದ ಬದಲಾವಣೆಗಳು ಭೂತಾರಾಧನೆ, ನಾಗಾರಾಧನೆ ಮುಂತಾದ ಧಾರ್ಮಿಕ ವಿಷಯಗಳಲ್ಲಿ ಆಗುತ್ತಿರುವ ಬದಲಾವಣೆಗಳು ಹಾಗೂ ಅವುಗಳ ಮುಂದುವರಿಕೆಯನ್ನು ವಿಶ್ಲೇಷಿಸಿದ್ದಾರೆ. ಬಂಟರ ಬದಲಾವಣೆಗೆ ಕಾರಣವಾದ ಭೂ ಸುಧಾರಣಾ ಕಾಯ್ದೆ, ಬಂಟರಲ್ಲಿನ ವಲಸೆ, ಧೈರ್ಯ, ಶ್ರಮ, ರಾಜಕೀಯ ಅಧಿಕಾರ, ವ್ಯಾಪಾರ, ಶಿಕ್ಷಣ ಮುಂತಾದ ವಿಷಯಗಳ ಮಾಹಿತಿಗಳು ಈ ಕೃತಿಯಲ್ಲಿ ದೊರಕುತ್ತದೆ.

'ತುಳುನಾಡು ಕನ್ನಡ ನುಡಿ' : ಮೋಹನ್‌ಕೃಷ್ಣ ರೈ (2012): ಇವರು ತಮ್ಮ ಕೃತಿಯಲ್ಲಿ ತುಳುನಾಡಿನಲ್ಲಿ ಜೈನ ಹಾಗೂ ಬಂಟ ಸಮುದಾಯಗಳು ಪರಸ್ಪರ ಹೊಂದಿರುವ ಸಂಬಂಧಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಸ್ಥಳೀಯ ಆಡಳಿತದಲ್ಲಿ ಗುತ್ತು ಮನೆಗಳ ಪಾತ್ರ, ಅಲ್ಲಿ ನಡೆಯುವ ದೈವಾರಾಧನೆ, ಭೂ ಸುಧಾರಣೆಯ ನಂತರ ಗುತ್ತು ಮನೆಗಳಲ್ಲಿ ಆದ ಬದಲಾವಣೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

‘ತುಳು ಸಂಸ್ಕೃತಿ - ಚತುರ್ಮುಖಿ ಅಧ್ಯಯನ’ : ಮೋಹನ್‌ಕೃಷ್ಣ ರೈ(1999) ಅವರ ಇನ್ನೊಂದು ಕೃತಿ ‘ತುಳು ಸಂಸ್ಕೃತಿ - ಚತುರ್ಮುಖಿ ಅಧ್ಯಯನ’ ದಲ್ಲಿ ತುಳುನಾಡಿನ ಸೀಮೆ ಮಾಗಣೆ, ಗ್ರಾಮ ಗುತ್ತು ಮುಂತಾದ ಆಡಳಿತ ಘಟಕಗಳು ಜಾತ್ಯಾಧಾರಿತ ಜಮೀನ್ದಾರಿ ಪದ್ಧತಿಯನ್ನು ಸೂಚಿಸುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ಮೋಹನ್‌ಕೃಷ್ಣ ರೈ, ‘ತುಳುನಾಡ ಸಿರಿ ಬದುಕು-ಹೋರಾಟದ ಕಥನ’ (2010) ಈ ಕೃತಿಯಲ್ಲಿ ಲೇಖಕರು ಗುತ್ತು ಕುಟುಂಬದ ನೆಲೆಯಿಂದ ರೂಪುಗೊಂಡ ಆಡಳಿತ ಘಟಕವಾದ್ದರಿಂದ ಅದರ ಮೇಲೆ ಮಾತೃವಂಶೀಯತೆಯ ಪ್ರಭಾವವು ದಟ್ಟವಾಗಿತ್ತು ಎಂದು ಅಭಿಪ್ರಾಯ ಪಡುತ್ತಾರೆ. ಅಳಿಯಕಟ್ಟು ಭೂಮಿಯ ಅಧಿಕಾರಕ್ಕೆ ಸಂಬಂಧಪಟ್ಟ ವಿಷಯವಾಗಿದ್ದರಿಂದ ತುಳುನಾಡಿನಲ್ಲಿ ಈ ಪದ್ಧತಿಗೆ ಹೆಚ್ಚಿನ ಮಹತ್ವವಿತ್ತು. ಸೋದರ ಮಾವ ಅಳಿಯಕಟ್ಟಿನಲ್ಲಿ ವಿಶೇಷ ಸ್ಥಾನವನ್ನು ಪಡೆಯುತ್ತಾನೆ. ತಾಯಿಯಿಂದ ಬರುವ ಆದಿಕಾರವು ಸಹೋದರಿಯ ಮಕ್ಕಳಿಗೆ ಹೋಗುತ್ತದೆ. ಇದು ಹೆಣ್ಣಿನ ಮೂಲಕ ಗಂಡು ಅಧಿಕಾರ ಪಡೆಯುವ ಹಾಗೂ ಭೂಮಾಲೀಕನಾಗುವ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಮಾತೃವಂಶೀಯ ಆಡಳಿತ ವ್ಯವಸ್ಥೆಯಲ್ಲಿ ಗುತ್ತಿನ ಒಡೆಯನ ಸಹೋದರಿಯ ಮಕ್ಕಳು ಅಧಿಕಾರವನ್ನು ಪಡೆಯುತ್ತಾರೆ. ಇಲ್ಲಿ ಹೆಣ್ಣಿಗೆ ಆಸ್ತಿಯ ಹಕ್ಕಿದ್ದರೂ ಅದನ್ನು ಅಧಿಕಾರದ ನೆಲೆಯಲ್ಲಿ ಅನುಭವಿಸುವುದು ಮಾತ್ರ ಗಂಡು ಎಂಬ ವಿಷಯದ ಮೇಲೆ ಬೆಳಕು ಚೆಲ್ಲಿದ್ದಾರೆ. ಸಿರಿ ಪಾಡ್ದನವು ಮಾತೃವಂಶೀಯ ಕುಟುಂಬ ವ್ಯವಸ್ಥೆಯಲ್ಲಿ ಪುರುಷರ ಪ್ರಾಧನ್ಯತೆ, ಪ್ರಭುತ್ವ, ಹೆಣ್ಣಿನ ಮೂಲಕ ಗುರುತಿಸಲ್ಪಡುವ ಸಮುದಾಯವೊಂದು ಹೆಣ್ಣನ್ನು ಮನೆಬಿಟ್ಟು ಹೋಗುವಂತೆ ಮಾಡುವುದು ಪುರುಷ ಪ್ರಾಧಾನ್ಯತೆಯ ಕಠೋರತೆನ್ನು ತೋರಿಸುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಮಾತೃವಂಶೀಯತೆಯ ಪ್ರಮುಖ ಲಕ್ಷಣಗಳ ಕುರಿತು ಈ ಕೃತಿಯಲ್ಲಿ ಮಾಹಿತಿಯು ಸಿಗುತ್ತದೆ.

ಶೈಲ. ಟಿ. ವರ್ಮರ ‘ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಆಧ್ಯಯನ’: ಈ ಕೃತಿಯು ದಕ್ಷಿಣ ಕನ್ನಡ ಜಿಲ್ಲೆಯ ಶಾಸನಗಳಲ್ಲಿ ಸಿಗುವ ಮಾಹಿತಿಗಳನ್ನು ಆಧರಿಸಿಕೊಂಡು ತುಳುನಾಡಿನ ರಾಜಕೀಯ ವ್ಯವಸ್ಥೆ, ಅರ್ಥ ವ್ಯವಸ್ಥೆ, ಆಡಳಿತ ಪದ್ಧತಿ, ಧರ್ಮ ಮುಂತಾದ ಅಂಶಗಳನ್ನು ಅಧ್ಯಯನ ಮಾಡಿದೆ. ಪ್ರಾಚೀನ ತುಳುನಾಡಿನಲ್ಲಿ ಆಡಳಿತದಲ್ಲಿ ಊರು ಎಂಬುದು ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು ವಿಶಾಲವಾದ ಆಡಳಿತ ಘಟಕವಾಗಿತ್ತು, ಅದರ ಆಡಳಿತ ಅಧಿಕಾರಿಯನ್ನು ನಾಯ್ಗರೆಂದು ಕರೆಯಲಾಗುತ್ತಿತ್ತು. ‘ಗ್ರಾಮ’ವು ಕೊನೆಯ ಆಡಳಿತ ಘಟಕವಾಗಿತ್ತು. ಅದನ್ನು ‘ಪೆರ್ಗಡೆ’, ‘ಅಧಿಕಾರಿ’ ಅಥವಾ ‘ಅತಿಕಾರಿ’, ‘ಸೇನಬೋವ’, ‘ಗ್ರಾಮಣಿ’ ಗಳು ಗ್ರಾಮದ ಆಡಳಿತದಲ್ಲಿ ಪ್ರಮುಖ ಪಾತ್ರವನ್ನು ವಹಿಸುತಿದ್ದರು. ‘ಅಧಿಕಾರಿ’ ಅಥವಾ ‘ಅತಿಕಾರಿ’ಯು ಎರಡು

ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದನು. ಊರಿನ ದೇವಾಲಯಗಳ ಉಸ್ತುವಾರಿ, ಗ್ರಾಮ ಮತ್ತು ಗುತ್ತುಗಳಿಂದ ತೆರಿಗೆ ವಸೂಲಿ ಮಾಡುವುದು. ಊರು ಮತ್ತು ಗ್ರಾಮ ಎಂಬ ಆಡಳಿತ ಘಟಕಗಳು ಸ್ಥಳೀಯ ಆಡಳಿತದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದವು ಎಂದು ಶಾಸನಗಳಿಂದ ತಿಳಿಯಬಹುದು.

ಬಿ.ಎಮ್ ಇಚ್ಲಂಗೋಡ್, ಅನುವಾದ ತುಫಾಲ್ ಮೊಹಮ್ಮದ್, 'ತುಳುನಾಡಿನ ಬ್ಯಾರಿಗಳು': ಈ ಕೃತಿಯು ತುಳುನಾಡಿನ ವಿವಿಧ ಸಮುದಾಯಗಳು ಮತ್ತು ತುಳುನಾಡಿನ ಸಮಾಜದಲ್ಲಿ ಮುಸ್ಲೀಮರ ಪಾತ್ರದ ಕುರಿತು ಬೆಳಕು ಚೆಲ್ಲುತ್ತವೆ. ಈ ಕೃತಿಯು ಮುಸ್ಲೀಮರ ಉತ್ತರದಾಯಿತ್ವದ ಮೇಲೆ ಬೆಳಕು ಚೆಲ್ಲುತ್ತದೆ. ಮುಸ್ಲೀಮರು ಪಿತೃ ಆಧರಿತ ವಂಶ ಪದ್ಧತಿಯನ್ನು ಅನುಸರಿಸುತ್ತಿದ್ದರೂ, ಲೋಗನ್‌ನ ಪ್ರಕಾರ ಉತ್ತರ ಮಲಬಾರ್‌ನ ಮುಸ್ಲೀಮರು ತಮ್ಮ ಪೂರ್ವಜರು ಅನುಸರಿಸುತ್ತಿದ್ದ ಮರುಮಕ್ಕತ್ತಯನ್ ಉತ್ತರದಾಯಿತ್ವ ಪದ್ಧತಿ(ಮಾತೃ ಪ್ರಧಾನ ಉತ್ತರದಾಯಿತ್ವ)ಯನ್ನು ಅನುಸರಿಸುತ್ತಿದ್ದರು. ಈ ಪದ್ದತಿಯು ಕಣ್ಣೂರಿನ ಆಲಿರಾಜರುಗಳು ಹಾಗೂ ಅರಕ್ಕಲ್ ರಾಜಮನೆತನಗಳಲ್ಲಿ ಕಾಣಸಿಗುತ್ತವೆ. ಬ್ಯಾರಿಗಳಲ್ಲಿ ಕಾಣಸಿಗುತ್ತಿದ್ದ ಮಾತೃ ಆಧರಿತ ವಂಶ ಪದ್ಧತಿಯು ಇಲ್ಲಿನ ಸ್ಥಳೀಯ ಸಮುದಾಯಗಳು ಅನುಸರಿಸುತ್ತಿದ್ದ ಪದ್ಧತಿಯಾಗಿತ್ತು. 20ನೆ ಶತಮಾನದಲ್ಲಿ ಶರೀಅತ್ ಕಾನೂನನ್ನು ಮುಸ್ಲೀಮರು ಅನುಸರಿಸುವಂತರಾಗಿ ಕ್ರಿ.ಶ 1937ರಿಂದ ಈ ಮಾಪಿಳ್ಳೆ ಮರುಮಕ್ಕತಾಯಮ್ ಕಾಯ್ದೆ(1939)ಯನ್ನು ತೆಗೆದು ಹಾಕಿ ರಾಜಮನೆತನಗಳಲ್ಲಿ ಉತ್ತರದಾಯಿತ್ವವನ್ನು ಮಾತೃ ಪ್ರಧಾನ ಉತ್ತರದಾಯಿತ್ವದಿಂದ ಪಿತೃ ಪ್ರಧಾನ ಉತ್ತರದಾಯಿತ್ವಕ್ಕೆ ವರ್ಗಾವಣೆ ಮಾಡಲಾಯಿತು. ತುಳುನಾಡಿನ ಸ್ಥಳೀಯರಲ್ಲಿದ್ದ ಬಳಿ ಪದ್ಧತಿ ಸಮಾನಾಂತರವಾಗಿ ಬ್ಯಾರಿಗಳಲ್ಲಿ ಇಲ್ಲಂ ಎಂಬ ಪದ್ಧತಿ ಇತ್ತು. ತುಳನಾಡಿನ ಬ್ಯಾರಿಗಳನ್ನು 16 ಇಲ್ಲಮ್ ಗಳಾಗಿ ವಿಂಗಡಿಸಿದ್ದಾರೆ. ಈ ಇಲ್ಲಮ್‌ಗಳು ತಾಯಿಯ ವಂಶದಿಂದ ಮುಂದುವರೆದಿದ್ದು. ಒಂದೇ ಇಲ್ಲಮ್‌ಗೆ ಸೇರಿದವರ ನಡುವೆ ವಿವಾಹ ಏರ್ಪಡುವಂತಿರಲಿಲ್ಲ ಎಂಬ ಮಾಹಿತಿಗಳು ಈ ಕೃತಿಯಲ್ಲಿ ದೊರಕುತ್ತವೆ.

ಮಂಜೇಶ್ವರ ಗೋವಿಂದ ಪೈರವರು ತುಳನಾಡಿನ ಇತಿಹಾಸ ಹಾಗೂ ಸಂಸ್ಕೃತಿಯ ಕುರಿತಾಗಿ ಸುಮಾರು 21 ಲೇಖನಗಳನ್ನು ಪ್ರಕಟಿಸುವುದರ ಮೂಲಕ ತುಳುನಾಡಿನ ಇತಿಹಾಸ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಗಂಗೊಳ್ಳಿ ಕೃಷ್ಣರಾವ್ ರವರು 'ಎ ಟ್ರಿಟೈಸ್ ಅನ್ ಅಳಿಯಸಂತಾನ ಲಾ ಎಂಡ್ ಯೂಸೇಜ್' ಕೃತಿಯಲ್ಲಿ ತುಳುನಾಡಿನಲ್ಲಿ ಅಸ್ತಿತ್ವದಲ್ಲಿರುವ ಅಳಿಯ ಸಂತಾನ ಕಟ್ಟಿನ ಮೂಲ, ಅನುಸರಿಸುತ್ತಿರುವ

ನಿಯಮಗಳು, ಅಳಿಯಸಂತಾನದಡಿಯಲ್ಲಿ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳನ್ನು ವಿವರಿಸಿದ್ದಾರೆ.

ಸ್ಯಾಮುಯೆಲ್ ವಿಲ್ಲಿಯ 'ಕೆನರಾ ಪಾಸ್ಟ್ ಎಂಡ್ ಪ್ರೆಸೆಂಟ್' ಎಂಬ ಕೃತಿಯು ದಕ್ಷಿಣ ಕನ್ನಡದ ಅಳಿಯಸಂತಾನ ಕಟ್ಟು, ಭೂಕಂದಾಯ ವ್ಯವಸ್ಥೆ, ಗೇಣಿ ಪದ್ಧತಿ, ರೈತ ಮತ್ತು ಭೂಮಾಲೀಕ ಸಂಬಂಧಗಳ ಕುರಿತು ವಿವರಿಸುತ್ತದೆ.

ಕೆ.ಜಿ ವಸಂತ ಮಾಧವರ 'ಕರಾವಳಿ ಕರ್ನಾಟಕದ ರಾಜಕೀಯ ಇತಿಹಾಸ ಅಧ್ಯಯನ ಮತ್ತು ಸಂಶೋಧನೆ', 'ಮೂಲಿಕೆಯ ಇತಿಹಾಸ' ದಲ್ಲಿ ಸ್ಥಳೀಯ ಆಡಳಿತವನ್ನು ತಿಳಿಯಲು ಸಹಾಯ ಮಾಡುತ್ತದೆ. ಕೆ.ಜಿ ವಸಂತ ಮಾಧವರವರ 'ಅಬ್ಬಕ್ಕ ದೇವಿಯರು' ಹಾಗೂ 'ರಿಲಿಜೀಯನ್ಸ್ ಇನ್ ಕೋಸ್ಟಲ್ ಕರ್ನಾಟಕ' ಎಂಬ ಕೃತಿಯಲ್ಲಿ ಕ್ರಿ. ಶ 1500ರಿಂದ 1763ರ ಕಾಲ ಘಟ್ಟದಲ್ಲಿ ತುಳನಾಡಿನಲ್ಲಿದ್ದ ವಿವಿಧ ದರ್ಮಗಳ ಸ್ಥಿತಿಗತಿಗಳನ್ನು ವಿವಿಧ ಪ್ರಾಥಮಿಕ ಆಧಾರಗಳನ್ನು ಬಳಸಿಕೊಂಡು ಬರೆದಿದ್ದಾರೆ. ಹೇರಂಜೆ ಕೃಷ್ಣ ಭಟ್ಟರ ಸಂಪಾದಕತ್ವದಲ್ಲಿ ಪ್ರಕಟಗೊಂಡ ಕೃತಿ 'ತುಳು ಕರ್ನಾಟಕ ಅರಸು ಮನೆತನಗಳು' ದಲ್ಲಿ ಡಾ. ಕೆ. ಜಿ. ವಸಂತ ಮಾಧವರು ಬರೆದಿರುವ 'ಮೂಲಿಕೆ ಸಾವಂತರು- ಐತಿಹಾಸಿಕ ವಿಶ್ಲೇಷಣೆ' ಎಂಬ ಲೇಖನದಲ್ಲಿ ಮೂಲಿಕೆ ಸೀಮೆಯಲ್ಲಿದ್ದ ಗುತ್ತುಗಳು, ರಾಜನ ಪಟ್ಟಾಭಿಷೇಕದಲ್ಲಿ ಗುತ್ತು- ಬಾವಗಳ ಪಾತ್ರದ ಕುರಿತು ಬರೆದಿದ್ದಾರೆ.

ಬಿ. ಸುರೇಂದ್ರ ರಾವ್‌ರವರ ಸಂಪಾದಕತ್ವದಲ್ಲಿ ಪ್ರಕಟಗೊಂಡ 'ರಿಟ್ರೈವ್ಡ್ ಏಕ್ರ್' ತುಳುನಾಡಿನ ಜನಪದ ಆಚರಣೆಗಳನ್ನು ತಿಳಿಯಲು ಸಹಾಯ ಮಾಡುತ್ತದೆ. ಇಂದಿರಾ ಹೆಗ್ಗಡೆಯವರ ಅವರು ಬರೆದ ಇತರ ಕೃತಿಗಳಾದ 'ಚೇಳಾರ ಗುತ್ತು ಮಾಂಜಣ್ಣಾಯ್ಗೆರ್' ತುಳುನಾಡಿನಲ್ಲಿ ಪ್ರಚಲಿತದಲ್ಲಿದ್ದ ಸಮಾಜವನ್ನು ತಿಳಿಯಲು ಸಹಾಯ ಮಾಡುತ್ತದೆ. ಪೀಟರ್ ವಿಲ್ಸನ್ ಪ್ರಭಾಕರ್‌ರವರ 'ಸ್ವಾತಂತ್ರ್ಯ ಸಂಗ್ರಾಮದ ೨೦೦ರ ನೆನಪು-ವಿಟ್ಲದ ಕ್ರಾಂತಿ' ಯಲ್ಲಿ ವಿಟ್ಲ ಸೀಮೆಯಲ್ಲಿದ್ದ 19 ಮಾಗಣೆಗಳು, ಮಾಗಣೆಗಳಿಗೆ ಹಾಗೂ ವಿಟ್ಲ ಸೀಮೆಯ ನಡುವೆ ಇದ್ದ ಸಂಬಂಧಗಳ ಕುರಿತು ಬರೆದಿದ್ದಾರೆ. ಆರ್. ಗೋಪಾಲ್ ಸಂಪಾದಕತ್ವದಲ್ಲಿ ಪ್ರಕಟಗೊಂಡ 'ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ' ಎಂಬ ಕೃತಿಯಲ್ಲಿ ಪಿ.ವಿ ಕೃಷ್ಣಮೂರ್ತಿಯವರ ಲೇಖನ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಆಡಳಿತ ಘಟಕಗಳು ಮತ್ತು ಆಡಳಿತ'ವು ದಕ್ಷಿಣ ಕನ್ನಡದ ಸ್ಥಳೀಯ ಆಡಳಿತ ಬಗ್ಗೆ ಮಾಹಿತಿ ನೀಡುತ್ತದೆ. ಬಾರಕೂರು ಉದಯರ 'ವಾಸ್ತವದ ಒಡಕುಗಳು ಇತಿಹಾಸದ ತೊಡಕುಗಳು' ಕೃತಿಯು

ತುಳುನಾಡಿನ ಸ್ಥಳೀಯ ಆಡಳಿತದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಬರ್ಟನ್ ಸ್ಟೈನ್‌ರ 'ಪೆಸೆಂಟ್ ಸ್ಟೇಟ್ ಅಂಡ್ ಸೊಸೈಟಿ ಇನ್ ಮಿಡೀವಲ್ ಸೌತ್ ಇಂಡಿಯಾ', ದನಂಜಯ ಕುಂಬ್ಳೆರ 'ಐತಿಹ್ಯಗಳು ಕಟ್ಟಿ ಕೊಡುವ ತುಳುನಾಡಿನ ಇತಿಹಾಸ', ಎಮ್. ಮುಕುಂದ ಪ್ರಭು ಸಂಪಾದಕತ್ವದ 'ಪೊಲಿ', ಎನ್. ಶ್ಯಾಮ್ ಭಟ್‌ರ 'ಜುಡಿಸಿಯರಿ ಅಂಡ್ ಪೊಲೀಸ್ ಅಡ್ಮಿನಿಸ್ಟ್ರೇಷನ್ ಇನ್ ಅರ್ಲಿ ಸೌತ್ ಕೆನರಾ' 'ಸೌತ್ ಕೆನರಾ ಎ ಸ್ಟಡಿ ಇನ್ ಕೊಲೋನಿಯಲ್ ಅಡ್ಮಿನಿಸ್ಟ್ರೇಷನ್ ಅಂಡ್ ರೀಜನಲ್ ರೆಸ್ಪಾನ್ಸ್', ವಹಾಬ್ ದೊಡ್ಡಮನೆಯವರ 'ತುಳುನಾಡಿನ ಮುಸ್ಲಿಮರು' ಮುಂತಾದ ಕೃತಿಗಳು ತುಳುನಾಡಿನ ವಿವಿಧ ವಿಚಾರಗಳ ಕುರಿತು ಬೆಳಕು ಚೆಲ್ಲುತ್ತವೆ.

ಕರಾವಳಿ ಕರ್ನಾಟಕದಲ್ಲಿ ಕಂಡುಬರುತ್ತಿರುವ ಗುತ್ತುಗಳನ್ನು ಕಥಾವಸ್ತುವನ್ನಾಗಿ ಮಾಡಿಕೊಂಡು ಅನೇಕ ಬರಹಗಾರರು ಕಥೆ, ನಾಟಕ, ಕಾದಂಬರಿಗಳನ್ನು ರಚಿಸಿದ್ದಾರೆ, ಡಿ. ಕೆ. ಚೌಟರವರು ಆನಂದ ಕೃಷ್ಣ ಎಂಬ ಕಾವ್ಯನಾಮದೊಂದಿಗೆ ತುಳುವಿನಲ್ಲಿ ಬರೆದಿರುವ 'ಮಿತ್ತಬೈಲ್ ಯಮುನಕ್ಕೆ' ಎಂಬ ಕಾದಂಬರಿಯನ್ನು ಮಹಮ್ಮದ್ ಕುಳಾಯಿಯವರು ಕನ್ನಡಕ್ಕೆ ಭಾಷಾಂತರಿಸಿರುತ್ತಾರೆ. ಈ ಕೃತಿಯಲ್ಲಿ ನವೀನವಾಗಿ ಒಂದು ಗುತ್ತು ಹೇಗೆ ರಚನೆಯಾಯಿತು, ಗುತ್ತು ಮನೆಗಳಲ್ಲಿ ನಡೆಯುವ ಸಾಂಸ್ಕೃತಿಕ ಆಚರಣೆಗಳು, ಗುತ್ತು ಮನೆಗಳ ದೌಲತ್ತು, ದರ್ಪ, ದಬ್ಬಾಳಿಕೆ, ಸಂಪತ್ತು, ಮಾತೃಪ್ರಧಾನ ವ್ಯವಸ್ಥೆ ಮುಂತಾದವುಗಳ ಚಿತ್ರಣಗಳು ದೊರಕುತ್ತವೆ. ಹಾಗೆಯೇ ಡಿ. ಕೆ. ಚೌಟರ 'ಪಿಲಿ ಪತ್ತಿ ಗಡಸ್' ಎಂಬ ನಾಟಕವು ಗುತ್ತಿನ ಯಜಮಾನನ ಕ್ರೌರ್ಯವನ್ನು ಬಿಂಬಿಸಿದರೆ, ಅವರ 'ಕರಿಯವಜ್ಜನ ಕಥೆಕುಲು' ಗುತ್ತು ಮನೆಯ ವಿವಿಧ ಅಂಶಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಎಚ್. ನಾಗವೇಣಿಯವರು ಬರೆದ 'ಗಾಂಧಿ ಬಂದ' ಕಾದಂಬರಿಯು ತುಳುನಾಡಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಥನವಾಗಿದ್ದು, ಗುತ್ತು ಮನೆಯ ಚಿತ್ರಣವು ಕಾದಂಬರಿಯ ಹಲವು ಕಡೆಗಳಲ್ಲಿ ಚಿತ್ರಿತವಾಗಿವೆ. ಡಾ. ನಾ ಮೊಗಸಾಲೆಯವರು ಬರೆದಿರುವ 'ಉಲ್ಲಂಘನೆ' ಕಾದಂಬರಿಯು ಒಂದು ಗುತ್ತಿನ ಮನೆಯ ಮೂರು ತಲೆಮಾರುಗಳ ಕಥೆಯಾಗಿದ್ದು, ಈ ಕಾದಂಬರಿಯಲ್ಲಿ ಜಮೀನುದಾರಿ ಸಂಪ್ರದಾಯದ ಗುತ್ತಿನ ಮನೆಯ ವೈಭವ, ಸಾಮಾಜಿಕ ಆಚರಣೆಗಳು, ಮಾತೃಪ್ರಧಾನ ಸಮಾಜ, ಅಳಿಯಕಟ್ಟು ಸಂಪ್ರದಾಯಗಳು, ಭೂತಾರಾಧನೆ, ಕೃಷಿ ಚಟುವಟಿಕೆಗಳು, ಮೂಲದಾಳುಗಳು, ಗುತ್ತಿನ ಒಡೆಯರು ಮೂಲಗೇಣಿದಾರ ಹಾಗೂ ಚಾಲಗೇಣಿದಾರರ ನಡುವಿನ ಸಂಬಂಧಗಳನ್ನು ಸುಂದರವಾಗಿ ಚಿತ್ರಿಸಲಾಗಿದೆ. ಆಧುನೀಕರಣ ಹಾಗೂ ಭೂ ಸುಧಾರಣಾ ಮಸೂದೆಯಿಂದಾಗಿ ಗುತ್ತಿನ ಮನೆಯೊಂದು ಹೇಗೆ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು ಎಂಬುದನ್ನು ಮನಮುಟ್ಟುವಂತೆ ಚಿತ್ರಿಸಿದೆ.

ತುಳುನಾಡಿನ ಅನೇಕ ಸಾಹಿತಿಗಳು ತುಳುನಾಡಿನ ಜನಪದ ಬದುಕು, ಕಲೆ, ಜನಪದ ಆಚರಣೆಗಳು, ಸಂಸ್ಕೃತಿ, ಆರಾಧನಾ ಕ್ರಮ, ವಿವಿಧ ಸಮುದಾಯಗಳ ಕುರಿತಾಗಿ ಅಧ್ಯಯನ ಮಾಡಿ, ತುಳುನಾಡಿನ ಸಮಾಜವನ್ನು ಅರ್ಥಮಾಡಿಕೊಳ್ಳುವಲ್ಲಿ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಬಿ.ಎ. ವಿವೇಕ್ ರೈ, ಅಮೃತ ಸೋಮೇಶ್ವರ, ಕೆ. ಚಿನ್ನಪ್ಪ ಗೌಡ, ಎ.ವಿ ನಾವಡ, ಪುರುಷೋತ್ತಮ ಬಿಳಿಮಲೆ, ಏರ್ಯ ಲಕ್ಷ್ಮೀನಾರಾಯಣ ಆಳ್ವ ಮುಂತಾದವರು. ಬಿ.ಎ ವಿವೇಕ ರೈರವರು ಬರೆದಿರುವ 'ತುಳು ಜನಪದ ಸಂಸ್ಕೃತಿ', ಹಾಗೂ 'ತೌಳವ ಸಂಸ್ಕೃತಿ' ಕೃತಿಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಜನಪದ ವಿನೋದಗಳಾದ ಕೋಳಿ ಅಂಕ, ಕಂಬಳ ಮುಂತಾದ ವಿಷಯಗಳ ಬಗ್ಗೆ ಮಾಹಿತಿಗಳು ಸಿಗುತ್ತವೆ. 'ತುಳು ಜನಪದ ಸಂಸ್ಕೃತಿ'ಯು ಪಾಡ್ದನಗಳಲ್ಲಿ ವ್ಯಕ್ತವಾಗುವ ತುಳುನಾಡಿನ ಸಂಸ್ಕೃತಿ, ಭೂತಾರಾಧನೆ ಉಲ್ಲೇಖವಿರುವ ಶಾಸನಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಎ.ವಿ ನಾವಡರ 'ತುಳು ಪೊಲಿ' ಹಾಗೂ ಅವರ ಸಂಪಾದಕತ್ವದಲ್ಲಿ 'ಕರಾವಳಿ ಜಾನಪದ' ಹಾಗೂ 'ತುಳುವ ದರ್ಶನ' ದಲ್ಲಿ ತುಳು ಪಾಡ್ದನಗಳ ಅಧ್ಯಯನ ಮತ್ತು ವಿಶ್ಲೇಷಣೆ ಮಾಡಿದ್ದಾರೆ. ಚಂದ್ರಶೇಖರ ದಾಮ್ಲೆಯವರು 'ಜಾತ್ರೆಗಳು ಒಂದು ಜಾನಪದೀಯ ಅಧ್ಯಯನ' ಎಂಬ ಕೃತಿಯಲ್ಲಿ ದೇವಸ್ಥಾನಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ಗ್ರಾಮದಲ್ಲಿರುವ ವಿವಿಧ ಸಮುದಾಯಗಳು ನಿರ್ವಹಿಸುವ ಪಾತ್ರದ ಕುರಿತು ಬರೆದಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಕರಾವಳಿ ಕರ್ನಾಟಕದ ಕುರಿತು ಅಧ್ಯಯನ ಮಾಡಿರುತ್ತಾರೆ. ಅವರ ಕೃತಿಗಳಾದ 'ಕರಾವಳಿ ಸಂಪದ' 'ಕಂಬಳ' ಗಳಲ್ಲಿ ಕರಾವಳಿ ಭಾಗದಲ್ಲಿ ನಡೆಯುವ ಕಂಬಳ, ಅದರ ಪ್ರಕಾರಗಳ, ಕಂಬಳದಲ್ಲಿ ಒಳಗೊಂಡ ಆಚರಣಾ ಸಂಪ್ರದಾಯಗಳ ಕುರಿತು ವಿವರಿಸಿದ್ದಾರೆ. ಬೋಳ ಚಿತ್ತರಂಜನ್ ಶೆಟ್ಟಿಯವರ 'ಬಿನ್ನೆದಿ', 'ತಮ್ಮಲೆ ಅರುವತ್ತೆ ಕಟ್ಟ್', 'ಮಾತೃ ಧರ್ಮ ಅಳಿಯ ಸಂತಾನ' ಎಂಬ ಕೃತಿಗಳಲ್ಲಿ ತುಳುನಾಡಿನ ಸಾಮಾಜಿಕ ಹಾಗೂ ಕೌಟುಂಬಿಕ ಕಟ್ಟುಕಟ್ಟಳೆಗಳನ್ನು ವಿಮರ್ಶೆ ಮಾಡಿದ್ದಾರೆ. ಅವರ 'ಬಿನ್ನೆದಿ'ಯು ಸಿರಿಯ ಕಥೆಯನ್ನು ಒಳಗೊಂಡಿದೆ. ಸಂಕೇತ್ ಪೂಜಾರಿಯ 'ಗ್ರಾಮ ದೈವ ಶ್ರೀ ಅಲೆತ್ತೂರು ಪಂಜುರ್ಲಿ' ಎಂಬ ವಿಶೇಷ ಸಂಚಿಕೆಯಲ್ಲಿ ಬಂಟ್ವಾಳದ ಅಗ್ರ ಬೈಲು ಗುತ್ತು ಮತ್ತು ಮೊಡಂಕಾಪು ಗುತ್ತುಗಳ ಬಗ್ಗೆ ಬರೆಯುತ್ತಾ ತುಳುನಾಡಿನ ದೈವಾರಾಧನೆಯ ಮೂಲವನ್ನು ವಿಶ್ಲೇಷಣೆ ಮಾಡಿದ್ದಾರೆ. ಡಾ. ಕೆ.ಎಂ ಮೇತ್ರಿ ಮತ್ತು ಎನ್. ಆರ್ ಹೆಗ್ಡೆ ರವರ 'ತುಳುನಾಡು ಹೆಗ್ಗಡೆ ಸಮುದಾಯ' ಎಂಬ ಕೃತಿಯು ಹೆಗ್ಗಡೆ ಸಮುದಾಯದ ಗುತ್ತುಗಳ ಬಗ್ಗೆ ಮತ್ತು ಅಲ್ಲಿ ನಡೆಯುವ ಆಚರಣೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಎಲ್.ಡಿ ಬಲ್ಲಾಳರ 'ಕರಾವಳಿ ಜಿಲ್ಲೆಯ ಜೈನ ಪರಂಪರೆ' ಕೃತಿಯು ತುಳುನಾಡಿನಲ್ಲಿರುವ ಜೈನರ ಬೀಡುಗಳು, ಅರಮನೆಗಳು

ಹಾಗೂ ಗುತ್ತುಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಅರುಣ್ ಕುಮಾರ್‌ರವರು ಸಂಪಾದಿಸಿರುವ 'ಮಂಜೊಟ್ಟಿ' ಕೃತಿಯು ಮೂಲ್ಕಿಯಲ್ಲಿ ನಡೆಯುವ ಅರಸು ಕಂಬಳದ ಐತಿಹಾಸಿಕ ಹಿನ್ನೆಲೆ, ಸಾಂಪ್ರದಾಯಿಕ ಆಚರಣೆಗಳು, ಕರಾವಳಿಯ ವಿವಿಧ ಭಾಗಗಳಲ್ಲಿ ನಡೆಯುವ ಕಂಬಳಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಮುದ್ದು ಮೂಡುಬೆಳ್ಳೆಯವರು ತಮ್ಮ 'ಮುಲ್ಕಿಯ ಸಾವಂತ ಅರಸರು' ಕೃತಿಯಲ್ಲಿ ಮೂಲ್ಕಿ ಸೀಮೆಯ ಸಾಂಪ್ರದಾಯಿಕ ಮತ್ತು ಪಾರಂಪರಿಕ ಆಡಳಿತ ವ್ಯವಸ್ಥೆ, ಮೂಲ್ಕಿ ಸೀಮೆಯಲ್ಲಿ ಬರುವ ಗುತ್ತುಮನೆಗಳು, ಅವುಗಳು ಮುಲ್ಕಿಯ ಸಾವಂತ ಅರಸರ ಪಟ್ಟಾಭಿಷೇಕದಲ್ಲಿ ವಹಿಸುತ್ತಿದ್ದ ಪಾತ್ರದ ಕುರಿತು ಬರೆದಿದ್ದಾರೆ. 'ಗುರುತು' ಪತ್ರಿಕೆಯಲ್ಲಿ ಬಿ.ಎಮ್.ರೋಹಿಣಿ, ರಮಾನಾಥ ಕೋಟೆಕಾರ್ ಮತ್ತು ಮುದ್ದು ಮೂಡುಬೆಳ್ಳೆರವರು 'ಬಿಲ್ಲವರ ಗುತ್ತು ಮತ್ತು ಗುರಿಕಾರ ಮನೆಗಳು' ಎಂಬ ಶೀರ್ಷಿಕೆಯಲ್ಲಿ ಸರಣಿಯಲ್ಲಿ ಲೇಖನಗಳನ್ನು ಪ್ರಕಟಿಸಿರುತ್ತಾರೆ.

ಮಂಗಳೂರು ವಿಶ್ವವಿದ್ಯಾನಿಲಯದ ಇತಿಹಾಸ ಅಧ್ಯಯನ ವಿಭಾಗವು ತುಳುನಾಡಿನ ಇತಿಹಾಸ, ಸಮಾಜ, ಆರ್ಥಿಕತೆಯ ಕುರಿತು ಅನೇಕ ಸಂಶೋಧನಾ ಮಹಾಪ್ರಬಂಧಗಳನ್ನು ರಚಿಸಿದೆ. ಶ್ರೀಧರ್ ನಾಯಕ್‌ರವರ 'ಸೊಸೈಟಿ ಅಂಡ್ ಪೊಲಿಟಿಕ್ಸ್ ಇನ್ ಸೌತ್ ಕೆನರಾ' ವು ತುಳನಾಡಿನ ಸಮಾಜ ಕುರಿತು ಮಾಹಿತಿ ನೀಡಿದರೆ, ಜಯರಾಜ್ ಎನ್ ರವರ 'ಸೊಸೈಟಿ ಎಂಡ್ ಜಸ್ಟೀಸ್ ಇನ್ ಪ್ರೀ ಕೊಲೋನಿಯಲ್ ತುಳುನಾಡು' ಮಹಾಪ್ರಬಂಧವು ಸಾಂಪ್ರದಾಯಿಕ ನ್ಯಾಯವ್ಯವಸ್ಥೆಯಲ್ಲಿ ಗುತ್ತುಗಳ ಪಾತ್ರದ ಕುರಿತು ಮಾಹಿತಿಯನ್ನು ನೀಡುತ್ತದೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ನವೀನ್ ರವರ ಅಪ್ರಕಟಿತ ಪಿ.ಎಚ್ಡಿ ಪ್ರಬಂಧ 'ವಸಾಹತು ಆಡಳಿತ ಮತ್ತು ವಾರಸುದಾರಿಕೆಯ ಆಯಾಮಗಳು' ದಲ್ಲಿ ವಿವಿಧ ವಾರಸುದಾರಿಕೆಯನ್ನು ವಿವರಿಸುತ್ತಾ ಗುತ್ತುಗಳಲ್ಲಿ ವಾರಸುದಾರಿಕೆಯ ಬಗ್ಗೆ ಬರೆದಿದ್ದಾರೆ.

ಮೇಲೆ ಚರ್ಚಿಸಿರುವ ಅಧ್ಯಯನಗಳನ್ನು ಅವಲೋಕಿಸಿದಾಗ ಕರಾವಳಿ ಕರ್ನಾಟಕದಲ್ಲಿರುವ ಗುತ್ತುಮನೆಗಳ ಬಗ್ಗೆ ಬಿಡಿ ಬಿಡಿಯಾದ ಸಂಶೋಧನಾ ಕಾರ್ಯಗಳು ನಡೆದಿರುವುದು ಕಂಡು ಬರುತ್ತದೆ. ಬಿ. ಸುರೇಂದ್ರ ರಾವ್ ರವರ 'ಬಂಟ್ಸ್ ಇನ್ ಹಿಸ್ಟರಿ ಅಂಡ್ ಕಲ್ಚರ್' ಹಾಗೂ ಇಂದಿರಾ ಹೆಗ್ಗಡೆಯವರ 'ಬಂಟರು- ಒಂದು ಸಮಾಜೋ-ಸಾಂಸ್ಕೃತಿಕ ಅಧ್ಯಯನ', ಕೃತಿಗಳು ಬಂಟ ಸಮುದಾಯವನ್ನು ಅಧ್ಯಯನ ಮಾಡುವಾಗ ಗುತ್ತುಮನೆಗಳ ಕುರಿತು ಬೆಳಕನ್ನು ಚೆಲ್ಲುತ್ತವೆ. ಈ ಎರಡು ಕೃತಿಗಳು ಒಂದು ಸಮುದಾಯವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಅದರ ಭಾಗವಾಗಿ ಗುತ್ತುಮನೆಗಳ ಕುರಿತಾದ ಅಧ್ಯಯನಗಳು ನಡೆದಿರುತ್ತವೆ.

ಪರಾಮರ್ಶನ ಗ್ರಂಥಗಳು

Primary Sources

Inscriptions

South Indian Inscriptions Vol -VII

- Inscription No-106, 234, 248, 273, 296, 369, 385

South Indian Inscriptions Vol -IX

- Inscription No-190, 419, 424, 444, 476, 525, 655

South Indian Inscriptions Vol -XXVII

- Inscription No- 128, 129, 130, 185 133, 156, 319, 370

Administrative Reports

1. 26th June 1944 Officer of Superintendent Hindu Religious Endowment ಮನವಿ ಪತ್ರ
2. ದಕ್ಷಿಣಕನ್ನಡ ದೇವಸ್ಥಾನ ಕಮಿಟಿ ಆಫೀಸು ಮಂಗಳೂರು 30-10-1930ರ ದಾಖಲೆ
3. Order dated Report of Office of Superintendent Hindu Religious Endowment dated 26-04-1933
4. ದಕ್ಷಿಣಕನ್ನಡ ದೇವಸ್ಥಾನ ಕಮಿಟಿ ಆಫೀಸು ಮಂಗಳೂರು 29-09-1930ರ ದಾಖಲೆ
5. Order dated Report of Office of Superintendent Hindu Religious Endowment dated 31-05-1929
6. ದಕ್ಷಿಣಕನ್ನಡ ಜಿಲ್ಲಾ ದೇವಸ್ಥಾನ ಕಮಿಟಿ, ಮಂಗಳೂರು 23-11-1930
7. Order dated Report of Office of Superintendent Hindu Religious Endowment dated 23-08-1929
8. Report of Office of Superintendent Hindu Religious Endowment dated 23-3-1934
9. 26th June 1944 Officer of Superintendent Hindu Religious Endowment ಮನವಿ ಪತ್ರ.
10. Religious Endowment Act, 1863
11. The Madras Aliyasantana(Karnataka Amendment) Act, 1961
12. The Hindu Succession Act, 1956
13. Jaina Succession Act, 1928
14. Tamil Nadu Aliyasantana Act, 1949, Tamil Nadu
15. In the Supreme Court of India – Civil Appellate Jurisdiction – Civil Apeal No. 2161/2012- Marumakkathayam Customary Law

16. Regular Appeals Nos. (M) 112, 115/56 and R.A Nos. 1 and 2/57, against the order of the Court of the Subordinate Judge, South Kanara Mangalore, in O.S No. 136 of 1948 Bola Manjayya Setty v. Shankar Ballal Alias Shankara Arasu Kinniakka Ballal

Books

Ashok Alva, Olasari. Manipal, 2001

B.A Saletore, *Ancient Karnataka, Vol.I, History of Tuluva*, Poona, 1936

B. Surendra Rao, *Bunts in History and Culture*, Mangalore, 2010.

B. Surendra Rao(ed), *The Retrieved Acre,* Prasaranga, Mangalore University, 2003.

Burton Stein, *Peasant State and Society in Medieval South India*, New Delhi, 1980.

D.D Kosambi, *An Introduction to the study of History*, Bombay, 1985.

E Thurston, *Castes and Tribes of Southern India, Vol. V*, Madras, 1909.

Francis Buchanan, *Journey from Madras through the countries of Mysore, Canara and Malabar, Second edition*, Madras, 1870.

Gangolli Krishna Rao, *A Treatise on Aliyasantana Law and Usage*, Mangalore,1898.

G.M Moraes*, Mangalore, A Historical Sketch*, Mangalore, 1927.

H.H Wilson, The Mackenzie Collection, Calcatta, 1828

Heroor Padmanabha Shetty, A True Treasure of Reading Pleasure, Mangalore 2014

K. Chinnappa Gowda, *Mask and Message*, Mangala Gangotri, 2005.

K.N Chitnis*, Kelady Polity*, Dharwad, 1974

K.G Vasantha Madhava, Religions in Coastal Karnataka, New Delhi, 1985

K.V Ramesh, *A History of South Canara*, Dharwar, 1980.

M. Mukunda Prabhu(ed*), Poli: Canara 200,* Mangalore, 2000

M.V Shanker Bhat, Aliyasantana Law, Mangalore, 2004
Nagendra Rao, Brahmanas of South India, Delhi, 2005

N. Shyam Bhat, *Judiciary and Police in Early Colonial South Kanara*, New Delhi, 1998.

N Shyam Bhat, South Kanara(1799-1860)- A Study in Colonial Administration and Regional Response,New Delhi,1998

P. Gururaja Bhatt, *Studies in Tuluva History and Culture*, Kalyanpura, 1985

Romila Thapar, *Ancient Indian Social History: Some Interpretations,* New Delhi, 1984.

Samuel Miley*, Canara: Past and Present*, Mangalore,1875.

W.Francis and others, *Gazetteer of South India* Vol. II, Delhi, 1988

Upadhyaya, U.P. (Ed.), Tulu Nighantu-Tulu Lexicon, Vol.3 Udupi, 1988-1997

- ಅಮ್ಮೆಂಬಳ ಶಂಕರ ನಾವಡ, ಶ್ರೀ ಕ್ಷೇತ್ರ ಸೋಮೇಶ್ವರ, ಮಂಗಳೂರು, 1988
- ಅಮೃತ ಸೋಮೇಶ್ವರ, ತುಳು ಪಾಡ್ದನ ಸಂಪುಟ, ಹಂಪಿ, 1997
- ಅಮೃತ ಸೋಮೇಶ್ವರ, ಅಬ್ಬಕ್ಕ ಸಂಕಥನ, ಮಂಗಳೂರು, 2011
- ಅಮೃತ ಸೋಮೇಶ್ವ,ತುಳು ಬದುಕು- ಕೆಲವು ಮುಖಗಳು, ಪುತ್ತೂರು, 1984
- ಅಮೃತ ಸೋಮೇಶ್ವರ(ಸಂ), ತುಳು ಸಂಸ್ಕೃತಿ ಕೆಲವು ಒಳನೋಟಗಳು- ಕೊಡಿಪು, ಮಂಗಳೂರು 2009
- ಅರಿಯಡ್ಕ ಲಕ್ಷ್ಮೀ ನಾರಾಯಣ ಶೆಟ್ಟಿ, ಅರಿಯಡ್ಕ ಏಳ್ನಾಡುಗುತ್ತು ವಂಶಧಾರಾ, ಪುತೂರು, 2016
- ಅಶಿತ್‌ಕುಮಾರ್ ಶೆಟ್ಟಿ, (ಸಂ), ದೆಮ್ಮಲೆ - ದೆಮ್ಮಲೆ ಕುಟುಂಬ ಕೈಪಿಡಿ, 2014
- ಅಶೋಕ ಆಳ್ವ, ತುಳುನಾಡಿನ ಪ್ರಾಣಿ ಜಾನಪದ, 2021, ಮಂಗಳೂರು
- ಅರುಣ ಕುಮಾರ್ಎಸ್.ಆರ್,(ed) ಮಂಜೊಟ್ಟಿ, ಮಂಗಳೂರು, 1993
- ಆರ್. ಎಸ್ ಶರ್ಮ, ಪ್ರಾಚೀನ ಭಾರತದಲ್ಲಿ ಶೂದ್ರರು, ಕನ್ನಡಕ್ಕೆ- ಡಾ. ಜೆ. ಶ್ರೀನಿವಾಸ ಮೂರ್ತಿ ಮತ್ತು ಇತರರು, 2006, ಬೆಂಗಳೂರು
- ಇಂದಿರಾ ಹೆಗ್ಗಡೆ, ತುಳುನಾಡಿನ ಗ್ರಾಮಾಡಳಿತ ಮತ್ತು ಅಜಲುಗಳು, ಬೆಂಗಳೂರು, 2004
- ಇಂದಿರಾ ಹೆಗ್ಗಡೆ, ಬಂಟರು-ಒಂದು ಸಮಾಜೋ-ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು. 2004
- ಇಂದಿರಾ ಹೆಗ್ಗಡೆ, ಚೇಳಾರ ಗುತ್ತು ಮಂಜಣ್ಣಾಯ್ಗೆರ್, ಬೆಂಗಳೂರು, 2009
- ಇಂದಿರಾ ಹೆಗ್ಗಡೆ, ತುಳುವರ ಮೂಲತಾನ ಆದಿ ಆಲಡೆ, ಬೆಂಗಳೂರು 2012
- ಇರ್ಫಾನ್ ಹಬೀಬ್, ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ, ಕನ್ನಡಕ್ಕೆ-ಬಿ.ವಿ ಕಕ್ಕಿಲಾಯ, 2013, ಬೆಂಗಳೂರು
- ಉದಯವರ್ಮರಾಜ, ತುಳುನಾಡಿನ ಗತವೈಭವ, ಕಾಸರಗೋಡು, 1998
- ಎ.ಸಿ ಭಂಡಾರಿ, ತುಳುವರ ನಾಡು-ನುಡಿ, ಮಂಗಳೂರು, 2019
- ಎ.ವಿ ನಾವಡ, ತುಳು ಪೊಲಿ, ಮಂಗಳೂರು, 2013
- ಎ.ವಿ ನಾವಡ(ಸಂ), ಕರಾವಳಿ ಜಾನಪದ, ಮಂಗಳೂರು, 2007
- ಎಂ. ಗಣಪತಿ ರಾವ್ ಐಗಳ್, ದಕ್ಷಿಣಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಮಂಗಳೂರು, 2004
- ಎಸ್. ಡಿ. ಶೆಟ್ಟಿ, ತುಳುನಾಡಿನ ಜೈನಧರ್ಮ- ಒಂದು ಸಾಂಸ್ಕೃತಿಕ ಅಧ್ಯಯನ, ಉಡುಪಿ, 2002
- ಎಮ್. ದೇಜಪ್ಪ ದೆಲ್ಲೋಡಿ, ಬಿಲ್ಲವ ಸಾಂಸ್ಕೃತಿಕ ಸಂಪದ, ಮಂಗಳೂರು, 2012
- ಎಲ್.ಡಿ ಬಳ್ಳಾಲ್, ಕರಾವಳಿ ಜಿಲ್ಲೆಗಳ ಜೈನ ಪರಂಪರೆ, ಮಂಗಳೂರು,2012
- ಎಚ್ ನಾಗವೇಣಿ, ಗಾಂಧಿ ಬಂದ, ಶಿವಮೊಗ್ಗ, 2011
- ಎಚ್. ಎಸ್ ಪೆರ್ಗಡೆ, ಕಾಂತಾಡಿಗುತ್ತು, 2010

- ಏರ್ಯ ಲಕ್ಷ್ಮಿ ನಾರಾಯಣ ಆಳ್ವ, ನೂರರ ನೆನಪು, ಮಂಗಳೂರು, 1997
- ಕೆದಂಬಾಡಿ ಜತ್ತಪ್ಪ ರೈ, ಬೇಟೆಯ ನೆನಪುಗಳು, 1983, ಪುತ್ತೂರು
- ಕೆ.ಎಂ ಮೇತ್ರಿ, ಎನ್ ಆರ್ ಹೆಗ್ಡೆ, ತುಳುನಾಡು ಹೆಗ್ಗಡೆ ಸಮುದಾಯ, ಬಳ್ಳಾರಿ, 2016
- ಕೆ.ವಿ.ರಮೇಶ್. ತುಳುನಾಡಿನ ಇತಿಹಾಸ, ಮೈಸೂರು, 1969.
- ಕಡವ ಶಂಭು ಶರ್ಮ, ತುಳು ದೇಶ ಭಾಷಾ ವಿಚಾರ, 1970
- ಕೆ.ಜಿ ವಸಂತ ಮಾಧವ. ಅಬ್ಬಕ್ಕ ದೇವಿಯರು: ಹಿಸ್ಟೋರಿಕಲ್ ಲೈಫ್ ಸ್ಕೆಚ್ ಅಂಡ್ ಅಚೀವ್‌ಮೆಂಟ್ಸ್ ಅಫ್ ಅಬ್ಬಕ್ಕಾಸ್ ಇನ್ ದ ಹಿಸ್ಟರಿ ಆಫ್ ತುಳುನಾಡು, 1998, ಮಂಗಳೂರು
- ಕೆ.ಜಿ ವಸಂತ ಮಾಧವ, ಮೂಲಿಕೆಯ ಇತಿಹಾಸ, 1988, ಮಂಗಳೂರು
- ಕೆ.ಜಿ ವಸಂತ ಮಾಧವ, ಕರಾವಳಿ ಕರ್ನಾಟಕದ ರಾಜಕೀಯ ಇತಿಹಾಸ ಅಧ್ಯಯನ ಮತ್ತು ಸಂಶೋಧನೆ, ಮಂಗಳೂರು, 1998
- ಕೆ.ವಿ. ರಮೇಶ, ತುಳುನಾಡಿನ ಶಾಸನಗಳು, ಮೈಸೂರು, 1978
- ಡಾ. ಕೆ. ಚಿನ್ನಪ್ಪ ಗೌಡ, ಭೂತಾರಾಧನೆ-ಜಾನಪದೀಯ ಅಧ್ಯಯನ, ಮಂಗಳಗಂಗೋತ್ರಿ, 1990
- ಕೆ. ಚಿನ್ನಪ್ಪ ಗೌಡ (ಸಂ),, ಸೇರಿಗೆ, ಮಂಗಳ ಗಂಗೋತ್ರಿ, 2000
- ಕೆ. ಮೋಹನ್ ಕೃಷ್ಣ ರೈ, ತುಳು ಸಂಸ್ಕೃತಿ: ಚತುರ್ಮುಖಿ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ,ಹಂಪಿ, 1999
- ಕೆ. ಮೋಹನ್‌ಕೃಷ್ಣ ರೈ, ತುಳುನಾಡ ಸಿರಿ ಬದುಕು-ಹೋರಾಟದ ಕಥನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010
- ಕೆ. ಮೋಹನ್‌ಕೃಷ್ಣ ರೈ, ತುಳುನಾಡು ಕನ್ನಡ ನುಡಿ, ಹಂಪಿ, 2012
- ಕೆ. ಮೋಹನ್‌ಕೃಷ್ಣ ರೈ, ತುಳುನಾಡ ಅಬ್ಬಕ್ಕ ರಾಣಿಯರು, 2022, ಹಂಪಿ
- ಗೋಪಾಲ. ಬಿ. ಶೆಟ್ಟಿ- ಬೋಳ ಚಿತ್ತರಂಜನ್ ದಾಸ್ ಶೆಟ್ಟಿ, ಪುತ್ತಿಗೆ ಗುತ್ತು, ಮೂಡಬಿದಿರೆ, 2013
- ನರೇಂದ್ರ ರೈ ದೇರ್ಲ, ಬೇಟೆ, ಪುತ್ತೂರು, 2007
- ನಚ್ಚಗುತ್ತು ರವೀಂದ್ರನಾಥ ಶೆಟ್ಟಿ, ಆತ್ಮ ಕಥನ, ಉಡುಪಿ, 2021
- ನವೀನ್ ಕುಮಾರ್ ಮರಿಕೆ, ದೈವಾರಾಧನೆ - ಸಾಂಸ್ಕೃತಿಕ ಅಧ್ಯಯನ, ಪುತ್ತೂರು 2017
- ನಾಗೇಗೌಡ ಎಚ್. ಎಲ್(ಸಂ), ಪ್ರವಾಸಿ ಕಂಡ ಇಂಡಿಯಾ, ಸಂಪುಟ ನಾಲ್ಕು, ಐಬಿಎಚ್ ಪ್ರಕಾಶನ, ಬೆಂಗಳೂರು, 2007,
- ನಾ.ಮೊಗಸಾಲೆ, ಉಲ್ಲಂಘನೆ, Bangalore, 2008.
- ಪಿ. ಗುರುರಾಜ ಭಟ್, ತುಳುನಾಡು, ಉಡುಪಿ, 2009
- ಪೀಟರ್ ಜೆ, ಕ್ಲಾಸ್, ತುಳುವ ದರ್ಶನ, ಕನ್ನಡ ಅನುವಾದ ಎ.ವಿ ನಾವಡ, ಮಂಗಳ ಗಂಗೋತ್ರಿ, 2020
- ಪುರುಷೋತ್ತಮ ಬಿಳಿಮಲೆ, ಕಂಬಳ, ಮೈಸೂರು, 1989
- ಪುರುಷೋತ್ತಮ ಬಿಳಿಮಲೆ(ಸಂ) ಸಿರಿ: ಅಮೃತ ಸೋಮೇಶ್ವರ ಅಭಿನಂದನಾ ಸಂಪುಟ, ಕಲಾಗಂಗೋತ್ರಿ, ಅಮೃತ ಸೋಮೇಶ್ವರ ಅಭಿನಂದನ ಸಮಿತಿ, ಉಚ್ಚಿಲ 1995

- ಪೂವಪ್ಪ ಕಾಣಿಯೂರ್, ಪೂಕರೆ ಅಂಡ್ ಪೇಪರ್ಸ್ ಇನ್ ಫೋಕ್ ಲೋರಿಸ್ಟ್,ಮೈಸೂರು, 2004
- ಪ್ರಭಾಕರ ಶಿಶಿಲ, ಶಿಕಾರಿಯ ಸೀಳುನೋಟ - ಬಡ್ಡದ್ಕ ಅಪ್ಪಯ್ಯ ಗೌಡರ ಸಾಹಸ ಕಥನ, ಸುಳ್ಯ, 1988
- ಪೀಟರ್ ವಿಲ್ಸನ್ ಪ್ರಭಾಕರ್, ಸ್ವಾತಂತ್ರ್ಯ ಸಂಗ್ರಾಮ 200ರ ನೆನಪು - ವಿಟ್ಲದ ಕ್ರಾಂತಿ, ಬಂಟ್ವಾಳ, 2000
- ಬಿ.ಎಸ್. ಭಂಡಾರಿ(ಸಂ), ದಕ್ಷಿಣಕನ್ನಡ ಜಿಲ್ಲೆಯ ಬಂಟರ ಯಾನೆ ನಾಡವರ ಸಮುದಾಯದ ಇತಿಹಾಸ ಮತ್ತು ಸಂಸ್ಕೃತಿ, ಬೆಂಗಳೂರು, 1996
- ಬಿ. ಸಚ್ಚಿದಾನಂದ ಹೆಗ್ಡೆ, ತುಳುಭಾಷೆ- ತುಳುನಾಡು : ಪುರಾಣ ಜಾನಪದಗಳಲ್ಲಿ ತುಳುನಾಡವರು , 2010, ಬೆಂಗಳೂರು
- ಬಿ.ಸಚ್ಚಿದಾನಂದ ಹೆಗ್ಡೆ, ತುಳುನಾಡವರ ಸಮಾಜ, ಬೆಂಗಳೂರು, 2010
- ಬಿ.ಸುರೇಂದ್ರ ರಾವ್, ಇತಿಹಾಸ ಮತ್ತು ಸಂಸ್ಕೃತಿಯಲ್ಲಿ ಬಂಟರು ಕನ್ನಡ ಆವೃತ್ತಿ ವಿ.ಬಿ ಅರ್ತಿಕಜೆ, ಮಂಗಳೂರು
- ಬಿ ವಸಂತ ಶೆಟ್ಟಿ, ಬ್ರಹ್ಮಾವರದ ಇತಿಹಾಸ, ಬ್ರಹ್ಮಾವರ, 1988
- ಬಿ.ವಿವೇಕ ರೈ (ಸಂ) ತುಳು ಸಾಹಿತ್ಯ ಚರಿತ್ರೆ, ಪ್ರಸರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2007
- ಬಿ. ವಿವೇಕ ರೈ, ತುಳು ಜಾನಪದ ಸಂಸ್ಕೃತಿ, ಬೆಂಗಳೂರು, 1985
- ಬನ್ನಂಜೆ ಬಾಬು ಅಮೀನ್, ತುಳುನಾಡಿನ ದೈವಗಳು-ಸಾಂಸ್ಕೃತಿಕ ವಿಶ್ಲೇಷಣೆ, ಬೆಂಗಳೂರು, 2012
- ಬನ್ನಂಜೆ ಬಾಬು ಅಮೀನ್- ಮೋಹನ್ ಕೋಟ್ಯಾನ್, ತುಳುನಾಡ ಗರಡಿಗಳ ಸಾಂಸ್ಕೃತಿಕ ಅಧ್ಯಯನ, ಉಡುಪಿ, 1990
- ಬೋಳ ಚಿತ್ತರಂಜನ್ ದಾಸ್ ಶೆಟ್ಟಿ, ತಮ್ಮಲೆ ಅರುವತ್ತ ಕಟ್ಟ್ - 2008, ಕುಪ್ಪಂ
- ಬಿ.ಎಮ್. ಇಚ್ಲಂಗೋಡ್, ಅನುವಾದ ತುಫಾಲ್ ಮೊಹಮ್ಮದ್, ತುಳುನಾಡಿನ ಬ್ಯಾರಿಗಳು, ಮಂಗಳೂರು, 2011
- ಬಾಸ್ಕರ ಶೆಟ್ಟಿ ಸಲ್ವಾಡಿ, ಸೌತ್‌ಕೆನರಾ- ವಸಾಹತುಶಾಹಿ ಪ್ರಭುತ್ವದಲ್ಲಿ ಕೃಷಿ ಬದುಕು. ಉಡುಪಿ, 2020,
- ಬೋಳ ಚಿತ್ತರಂಜನ್ ದಾಸ್ ಶೆಟ್ಟಿ, ಬಿನ್ನೆದಿ, ಮಂಗಳೂರು 2008
- ಬಾರಕೂರು ಉದಯ, ವಾಸ್ತವದ ಒಡಕುಗಳು ಇತಿಹಾಸದ ತೊಡಕುಗಳು, ಬೆಂಗಳೂರು, 2012.
- ಮಹಮ್ಮದ್ ಕುಳಾಯಿ, ಚೌಟರ ಮಿತ್ತಬೈಲ್ ಯಮುನಕ್ಕ, ಮಂಗಳೂರು, 2010
- ಮುದ್ದು ಮೂಡುಬೆಳ್ಳೆ, ತುಳುಜನ ಜಾನಪದ, 2015, ಮಂಗಳೂರು
- ಮುದ್ದು ಮೂಡುಬೆಳ್ಳೆ, ನಾಡುನುಡಿಯದೊಂದು ಬಗೆ- ಎಡ್ಮೇರು ಶ್ರೀ ಸಾವಿರಾಳ ಧೂಮಾವತಿ, ಹೇಮಾಂಶು ಪ್ರಕಾಶನ, ಮಂಗಳೂರು, 2003
- ಮುದ್ದು ಮೂಡುಬೆಳ್ಳೆ, ಮುಲ್ಕಿಯ ಸಾವಂತರಸರು, ಮಂಗಳೂರು. 2011
- ಶೈಲ ಟಿ ವರ್ಮ, ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, 2002
- ಸಾಯಿಗೀತಾ,ಮರವೂರುಬೂಡು ತ್ಯಾಂಪು ಸೆಟ್ಯಾಲ್, ಮಂಗಳೂರು 2016
- ಸಾಯಿಗೀತ (ಸಂ) ಮರೋಳಿ ಶ್ರೀ ಸೂರ್ಯನಾರಾಯಣ ಕ್ಷೇತ್ರ ಪರಿಚಯ, ಮಂಗಳೂರು, 2016

- ಶೇಖರ, ಬಂಟರು ಬದುಕು ಮತ್ತು ಬದಲಾವಣೆ, ಶಿವಮೊಗ್ಗ, 2009
- ಶಿರೂರು ಶಿವರಾಮ ಶೆಟ್ಟಿ- ಬಂಟರ ಮೂಲ ಒಂದು ಅಧ್ಯಯನ, ಬಂಟರ ಯಾನೆ ನಾಡವರ ಸಂಘ ದಕ್ಷಿಣಕನ್ನಡ, 1995
- ಸೇಡಿಯಾಪು ಕೃಷ್ಣ ಭಟ್(ಸಂ), ತೆಂಕನಾಡು, ಕಾಸರಗೋಡು, 1947
- ಸಂಕೇತ್ ಪೂಜಾರಿ, ಗ್ರಾಮದೈವ ಶ್ರೀ ಅಲೆತ್ತೂರ ಪಂಜುರ್ಲಿ, ಮುಡಿಪು, ಬಂಟ್ವಾಳ 2017
- ಸುನೀತಾ ಶೆಟ್ಟಿ- ರತ್ನಾಕರ ಶೆಟ್ಟಿ(ಸಂ), ಬಂಟರು ಕೆಲವು ಅಧ್ಯಯನಗಳು, ಮುಂಬಯಿ, 2003
- ಶೀನಪ್ಪ ಹೆಗ್ಗಡೆ, ಸಮಗ್ರ ಸಾಹಿತ್ಯ, 1991, ಉಡುಪಿ
- ಚಂದ್ರಶೇಖರ ಮೇಲಾಂಟ (ಸಂ), ಕಿರಾಳೆಗುತ್ತು ವಂಶಧಾರಾ, ಕಿರಾಳೆಗುತ್ತು, 2016
- ಚಂದ್ರಶೇಖರ ದಾಮ್ಲೆ, ಜಾತ್ರೆಗಳು - ಒಂದು ಜಾನಪದೀಯ ಅಧ್ಯಯನ, ಉಡುಪಿ, 1995
- ಧನಂಜಯ ಕುಂಬ್ಳೆ, ಐತಿಹ್ಯಗಳು ಕಟ್ಟಿಕೊಡುವ ತುಳುನಾಡಿನ ಇತಿಹಾಸ, ಮಂಗಳೂರು, 2016
- ತಿಮಂಗೂರು ಸುಬ್ಬಯ್ಯ ಶೆಟ್ಟಿ, ಮಾಗಂಣ್ತಡಿ ಮುತ್ತಕ್ಕೆ, ಮಂಗಳೂರು, 2023
- ದಂಬೆಕ್ಕಾನ ಸದಾಶಿವ ರೈ, ನಾವು ಬಂಟರು, ಕೆಯ್ಯೂರ್
- ಡಿ.ಸುವಾಸಿನಿ, ಗುತ್ತಿನ ಮನೆಯಿಂದ ಜಗತ್ತಿನ ಅಂಗಳಕ್ಕೆ, ಮಂಗಳೂರು, 1997
- ರಮಾನಾಥ ಕೋಟೆಕಾರ್, ತುಳುನಾಡಿನ ಬಿಲ್ಲವರು-ಒಂದು ಅಧ್ಯಯನ, ಮಂಗಳೂರು, 2012
- ವಹಾಬ್ ದೊಡ್ಡಮನೆ, ತುಳುನಾಡಿನ ಮುಸ್ಲಿಮರು, ಮಂಗಳೂರು, 2008
- ವಿಶ್ವನಾಥ ಶೆಟ್ಟಿ ಅಲ್ಯೈತ್ತಿಮಾರು ಗುತ್ತು(ಸಂ), ಕಲ್ಲಾಜೆಗುತ್ತು - ಕಲ್ಲಾಜೆ ವಂಶವೃಕ್ಷ, ಮಾಣಿ, ಪುತ್ತೂರು
- ಹೇರಂಜೆ ಕೃಷ್ಣ ಭಟ್ಟ, ಎಸ್. ಡಿ ಶೆಟ್ಟಿ (ಸಂ), ತುಳು ಕರ್ನಾಟಕ ಅರಸು ಮನೆತನಗಳು- ಪ್ರಸರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2000

ಮಾರ್ಗದರ್ಶಕರು

ಡಾ. ತ್ರಿವೇಣಿ

ಸಹ ಪ್ರಾಧ್ಯಾಪಕರು

ಇತಿಹಾಸ ಅಧ್ಯಯನ ವಿಭಾಗ

ಮಂಗಳೂರು ವಿಶ್ವವಿದ್ಯಾನಿಲಯ

ಸಂಶೋಧನಾ ವಿದ್ಯಾರ್ಥಿ

(ಜ್ಯೋತಿ. ಪಿ)